ಅಖಿಲ ಕರ್ನಾಟಕ

# ಶಿಕ್ಷಕ ಸಮಾಚಾರ

ಮೇ 2013 ಮಾಸ ಪತ್ರಿಕೆ

ಸಂಪುಟ : 35
ಸಂಚಿಕೆ : 9
ಪುಟ : 12
ಬೆಲೆ : ₹ 5/-




1




2

## ದೆಹಲಿಯಲ್ಲಿ ಧರಣಿ




3




4

A Journal of Karnataka State Secondary Teachers' Association

# ಸಂಪಾದಕೀಯ

ಏಪ್ರಿಲ್ – ಮೇ ತಿಂಗಳು ಶಿಕ್ಷಕರಿಗೆ ರಜೆಯ ಕಾಲ. ಇಡೀ ವರ್ಷ ಬೋಧನೆಯಲ್ಲಿ ತೊಡಗಿಸಿಕೊಂಡು ದುಡಿದಿರುತ್ತಾರೆ. ಈಗ ಪ್ರವಾಸ ಕೈಗೊಂಡು ಮನೆಯವರೊಂದಿಗೆ ವಿರಮಿಸುವ ಸಮಯ. ಆದರೆ ಆ ಬಿಡುವು ಈ ವರ್ಷ ನಮ್ಮ ಶಿಕ್ಷಕರಿಗೆ ಸ್ವಲ್ಪ ಕಡಿಮೆಯಾಗಿದೆಯೇನೋ. ಕಾರಣ ಎಸ್.ಎಸ್.ಎಲ್.ಸಿ ಮೌಲ್ಯಮಾಪನ ಪ್ರಕ್ರಿಯೆಯಲ್ಲಿ ಶಿಕ್ಷಕರೆಲ್ಲ ಸಕ್ರಿಯವಾಗಿ ತೊಡಗಿಸಿಕೊಂಡಿದ್ದುದು. ಅದರ ಫಲವಾಗಿ ಈಗಾಗಲೇ ಎಸ್.ಎಸ್.ಎಲ್.ಸಿ. ಹಾಗೂ ಪಿ.ಯು.ಸಿ ಫಲಿತಾಂಶಗಳು ಪ್ರಕಟವಾಗಿದೆ. ಈ ಪರೀಕ್ಷೆಗಳಲ್ಲಿ ಉತ್ತಮ ಸಾಧನೆ ಮಾಡಿ ಉತ್ತೀರ್ಣರಾಗಿರುವ ಎಲ್ಲಾ ವಿದ್ಯಾರ್ಥಿಗಳಿಗೂ ಶಿಕ್ಷಕ ಸಮಾಚಾರದ ಅಭಿನಂದನೆಗಳು. ಹಾಗೆಯೇ ವಿದ್ಯಾರ್ಥಿಗಳಿಗೆ ತಮ್ಮ ಪರಿಣಾಮಕಾರಿ ಬೋಧನೆಯ ಮೂಲಕ ಉತ್ತಮ ಅಂಕಗಳಿಸಲು ನೆರವಾದ ಎಲ್ಲಾ ಶಿಕ್ಷಕ ಗೆಳೆಯರಿಗೆ ವಿಶೇಷ ಅಭಿನಂದನೆಗಳು. ವಿದ್ಯಾರ್ಥಿಗಳ ಸಾಧನೆಯಿಂದ ಹೆಮ್ಮೆ ಪಡುತ್ತಿರುವ ಶಿಕ್ಷಕರೆಲ್ಲರ ಸಂತೋಷದಲ್ಲಿ ಶಿಕ್ಷಕ ಸಮಾಚಾರವು ತುಂಬು ಮನದಿಂದ ಭಾಗಿಯಾಗುತ್ತದೆ.

ಈ ತಿಂಗಳು ನಾಡಿನ ಕೆಲವು ಮಹನೀಯರನ್ನು ಸ್ಮರಿಸುವ ಸಮಯ. 'ದಯವೇ ಧರ್ಮದ ಮೂಲವಯ್ಯ ದಯವೇಬೇಕು ಸಕಲ ಪ್ರಾಣಿಗಳೆಲ್ಲರಲಿ' ಎಂಬ ಮಾನವೀಯ ತತ್ವವನ್ನು ಸಾರಿ ಹೇಳಿದ ಅದ್ಭುತ ಮಾನವತಾವಾದಿ, ಸಮಾಜ ಸುಧಾರಕ ಬಸವಣ್ಣನವರ ಜನ್ಮ ಜಯಂತಿ ಇದೇ 13 ರಂದು. ಈ ಸಂದರ್ಭದಲ್ಲಿ ನಾವೆಲ್ಲರೂ ದಯಾವಂತರಾದರೆ, ಬಸವೇಶ್ವರ ಜಯಂತಿಯನ್ನು ಸಾರ್ಥಕವಾಗಿ ಆಚರಿಸಿದಂತೆ ಎನ್ನುವ ವಿಶ್ವಾಸ ನಮ್ಮದು. ಶಂಕರಾಚಾರ್ಯರು ಮತ್ತು ರಾಮಾನುಜಾಚಾರ್ಯರು ನಮ್ಮ ನಾಡಿನ ಶ್ರೇಷ್ಠ ಸಿದ್ಧಾಂತಗಳ ಪ್ರತಿಪಾದಕರು. ಶ್ರೀ ಶಂಕರಾಚಾರ್ಯರ ಅದ್ವೈತ ಸಿದ್ಧಾಂತ ಹಾಗೂ ಶ್ರೀ ರಾಮಾನುಜಾಚಾರ್ಯರ ವಿಶಿಷ್ಟಾದ್ವೈತ ಸಿದ್ಧಾಂತ ಜಗತ್ತಿನ ಗಮನ ಸೆಳೆದಿದೆ. ಇಂತಹ ಮಹನೀಯರ ಜಯಂತಿಯೂ ಈ ತಿಂಗಳಲ್ಲಿ ಬಂದಿರುವುದು. ವಿಶೇಷ. ಈ ಆಚಾರ್ಯರನ್ನೂ ಅವರ ಸಿದ್ಧಾಂತವನ್ನು ನೆನೆಯುವುದು ನಮ್ಮ ಕರ್ತವ್ಯವೆಂದು ಭಾವಿಸುತ್ತೇನೆ. ಬಸವ, ಶಂಕರ, ರಾಮಾನುಜರು ನಮನೆಲ್ಲ ಸ್ಫೂರ್ತಿಯನ್ನು ತುಂಬಲಿ ಎಂದು ಆಶಿಸೋಣ.

ಇದೇ ತಿಂಗಳು ಅಕ್ಷಯ ತದಿಗೆ ಯ ಆಚರಣೆಯೂ ಕೂಡ. ಈ ದಿನದಂದು ಮಾಡಿದ ಕೆಲಸವೆಲ್ಲವೂ ಅಕ್ಷಯವಾಗುತ್ತಿತ್ತೆನ್ನುವ ನಂಬಿಕೆ ಇದೆ. ನಮ್ಮೆಲ್ಲರ ಜ್ಞಾನ ಸಂಪತ್ತು ಈ ಹಬ್ಬದ ಆಚರಣೆಯ ಮೂಲಕ ವೃದ್ಧಿಸಲೆಂದು ಪ್ರಾರ್ಥಿಸೋಣ.

ಸಂಪಾದಕ

# ವಿವೇಕವಾಣಿ




ನಿಮ್ಮ ಸೌಲಭ್ಯಗಳನ್ನೂ ನಿಮ್ಮ ಸುಖಗಳನ್ನೂ ನಿಮ್ಮ ಹೆಸರು, ಕೀರ್ತಿ, ಸ್ಥಾನಮಾನಗಳನ್ನೂ, ಅಷ್ಟೇ ಏಕೆ, ನಿಮ್ಮ ಜೀವಿತವನ್ನೇ ಬಲಿಕೊಟ್ಟು ಒಂದು ಮಾನವ ಸೇತುವನ್ನು ನಿರ್ಮಿಸಿ. ಅದರ ಮೂಲಕ ಲಕ್ಷಾಂತರ ಜನರು ಈ ಭವ ಜಲಧಿಯನ್ನು ದಾಟುವಂತಾಗಲಿ.

# ಪರಿವಿಡಿ


- ದೆಹಲಿಯಲ್ಲಿ ಧರಣಿ 3
- ನಾಯಕತ್ವದ ಗುಣಲಕ್ಷಣಗಳು 4
- ಆತ್ಮ ಶ್ರದ್ಧೆಯನ್ನು ಬದುಕಿಸಿದ ಚೈತನ್ಯ 6
- ಸ್ವದೇಶಿ ಪಾಲನೆಯಿಂದ ಸ್ವಾವಲಂಬಿ ಭಾರತ 7


## ಮುಖಪುಟ ಚಿತ್ರ ವಿವರಣೆ

1. ಸಂಸತ್ ಸದಸ್ಯ ಶ್ರೀ ಪ್ರಕಾಶ್ ಜಾವಡೇಕರ್, ಶಿಕ್ಷಕ ಪ್ರತಿನಿಧಿಗಳನ್ನು ಉದ್ದೇಶಿಸಿ ಮಾತನಾಡುತ್ತಿರುವುದು.
2. ಎಬಿಆರ್ಎಸ್ಎಂನ ಪ್ರಧಾನ ಕಾರ್ಯದರ್ಶಿ ಪ್ರೊ. ಎಸ್. ಪಿ. ಸಿಂಘಲ್‌ರವರು ಧರಣಿಯ ಉದ್ದೇಶ ತಿಳಿಸುತ್ತಿರುವುದು.
3. ವಿವಿಧ ರಾಜ್ಯಗಳ ಪ್ರತಿನಿಧಿ ಶಿಕ್ಷಕರುಗಳು ಬೇಡಿಕೆ ಫಲಕಗಳೊಂದಿಗೆ.
4. ಕರ್ನಾಟಕದ ಪ್ರತಿನಿಧಿಗಳು ವೇದಿಕೆಯ ಮುಂಭಾಗದಲ್ಲಿ

# ದೆಹಲಿಯಲ್ಲಿ ಧರಣಿ

1988 ರಲ್ಲಿ ಜನ್ಮತಳೆದ ಅಖಿಲಭಾರತೀಯ ರಾಷ್ಟ್ರೀಯ ಶೈಕ್ಷಿಕ ಮಹಾಸಂಘವು ಈ ವರ್ಷ ಶಿಕ್ಷಣ ಕ್ಷೇತ್ರದ ತನ್ನ 25 ವರ್ಷಗಳ ಸಾರ್ಥಕ ಸೇವೆಯನ್ನು ಪೂರ್ಣಗೊಳಿಸಿದೆ.

ಬೆಳ್ಳಿಹಬ್ಬದ ಸಂದರ್ಭದಲ್ಲಿ ಕಾಲೇಜು ಶಿಕ್ಷಕರ ಸಮಾವೇಶ, ಸೆಕೆಂಡರಿ ಶಿಕ್ಷಕರ ಸಮಾವೇಶ ಹಾಗೂ ಪ್ರೈಮರಿ ಶಿಕ್ಷಕರ ಸಮಾವೇಶವನ್ನು ದೇಶದ ವಿವಿಧ ಭಾಗಗಳಲ್ಲಿ ನಡೆಸಿ ಅವರವರ ಸಮಸ್ಯೆಗಳು ಹಾಗೂ ಪರಿಹಾರವನ್ನು ಕೂಲಂಕುಷವಾಗಿ ಚರ್ಚಿಸಿದೆ. ಕಳೆದ ಅಕ್ಟೋಬರ್ 26, 27, 28 ರಂದು ಬೆಂಗಳೂರಿನ ಹೊರವಲಯದ ಚನ್ನೇನಹಳ್ಳಿಯಲ್ಲಿ 5ನೇ ರಾಷ್ಟ್ರೀಯ ಅಧಿವೇಶನವನ್ನು ಆಯೋಜಿಸಿ ಶಿಕ್ಷಣಕ್ಕೆ ಸಂಬಂಧಿಸಿದ ಠರಾವುಗಳನ್ನು ಚರ್ಚಿಸಿ ಕೇಂದ್ರ ಶಿಕ್ಷಣ ಸಚಿವರಿಗೆ ತಲುಪಿಸಿದೆ.

ಇದೇ ಏಪ್ರಿಲ್ 25 ರಂದು, ಶಿಕ್ಷಣ – ಶಿಕ್ಷಕರ ಹಲವು ಸಮಸ್ಯೆಗಳನ್ನು ಪರಿಹರಿಸಲು ಕೇಂದ್ರ ಸರ್ಕಾರವನ್ನು ಒತ್ತಾಯಿಸಿ ಒಂದು ದಿನದ ಧರಣಿ ಸತ್ಯಾಗ್ರಹವನ್ನು ಪಾರ್ಲಿಮೆಂಟ್ ಭವನದೆದುರು ನಡೆಸಲಾಯಿತು. ದೇಶದ 22 ರಾಜ್ಯಗಳ ಪೂರ್ವ ಪ್ರಾಥಮಿಕ ಶಾಲಾ ಶಿಕ್ಷಕರಿಂದ ಹಿಡಿದು ವಿಶ್ವವಿದ್ಯಾಲಯ ಸ್ತರದ ಸಹಸ್ರಾರು ಶಿಕ್ಷಕರು ಈ ಧರಣಿ ಸತ್ಯಾಗ್ರಹದಲ್ಲಿ ಭಾಗವಹಿಸಿದ್ದರು. ಜಂತರ್‌ಮಂತರ್‌ನ ಸುತ್ತಮುತ್ತ ಎಲ್ಲೆಲ್ಲು ನೋಡಿದರೂ ಆಯಾ ರಾಜ್ಯಗಳ ಪ್ರತಿನಿಧಿಗಳು ತಮ್ಮ ತಮ್ಮ ಸಂಘಟನೆಯ ಬ್ಯಾನರನ್ನು ಹಿಡಿದು 'ಶಿಕ್ಷಕರ ಬೇಡಿಕೆಯನ್ನು ಈಡೇರಿಸಿ' ಎಂದು ಕೂಗುತ್ತಿದ್ದ ಧ್ವನಿಯು ಪಾರ್ಲಿಮೆಂಟ್ ಭವನದಲ್ಲಿ ಮಾರ್ದನಿಸಿತು ! ಧರಣಿಯ ನೇತೃತ್ವವನ್ನು ಎಬಿಆರ್‌ಎಸ್‌ಎಂನ ಅಧ್ಯಕ್ಷರಾದ ಡಾ॥ ವಿಮಲ್ ಪ್ರಸಾದ್ ಅಗರ್‌ವಾಲ್ ಮತ್ತು ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಆರ್. ಪಿ. ಸಿಂಘಲ್‌ರವರು ವಹಿಸಿದ್ದರು. ಪ್ರಸಕ್ತ ಸರಕಾರ ಶಿಕ್ಷಕರನ್ನು ಅತ್ಯಂತ ದಯನೀಯ ಸ್ಥಿತಿಯಲ್ಲಿಟ್ಟಿದೆ ಎಂದು ಬಿ.ಜೆ.ಪಿ. ಸಂಸದ ಪ್ರಕಾಶ್ ಜಾವ್‌ಡೇಕರ್‌ರವರು ಅಭಿಪ್ರಾಯಪಟ್ಟರು. ಸರ್ಕಾರ ಶಿಕ್ಷಕರಿಗೆ ಅತಿ ಕಡಿಮೆ ಸಂಬಳವನ್ನು ಕೊಟ್ಟು ವಿವಶರನ್ನಾಗಿ ಮಾಡಿದೆ. ಇದಲ್ಲದೆ ಅನೇಕ ಕೆಲಸದ ಜವಾಬ್ದಾರಿಯ ಕೆಲಸವನ್ನು ಕೊಡಲಾಗಿದೆ. ಸರ್ಕಾರದ ಉಪೇಕ್ಷೆ ಹಾಗೂ ಆರ್‌ಟಿಇ ಕಾನೂನಿನ ಕಠಿಣ ಅಧಿನಿಯಮದಿಂದ ಒಂದು ಲಕ್ಷದ ಹತ್ತು ಸಾವಿರ ಶಾಲೆಗಳು ಮುಚ್ಚುವ ಹಂತಕ್ಕೆ ಬಂದಿದೆ. ಇಡೀ ದೇಶದಲ್ಲಿ 7 ಲಕ್ಷ ಶಿಕ್ಷಕರ ಹುದ್ದೆಗಳು ಭರ್ತಿಯಾಗದೆ ಉಳಿದಿವೆ. ಇದು ಸಕಾರದ ಶಿಕ್ಷಣದ ಬಗೆಗಿನ ಉಪೇಕ್ಷಿತ ಧೋರಣೆಯನ್ನು ತೋರಿಸುತ್ತದೆ ಎಂದು ಕೇಂದ್ರ ಸರ್ಕಾರವನ್ನು ಟೀಕಿಸಿದರು.

ಇದೇ ಸಂದರ್ಭದಲ್ಲಿ ಸಂಸದ ಅರ್ಜುನ್ ಮೇಘವಾನ್‌ರವರು ಮಾತನಾಡಿ "ವಾಸ್ತವದಲ್ಲಿ 15 ಸೂತ್ರವಿರುವ ಈ ಬೇಡಿಕೆ ಪತ್ರ ಶಿಕ್ಷಕರ ಬರೀ ಸಮಸ್ಯೆಯ ಬೇಡಿಕೆ ಪತ್ರವಲ್ಲ. ರಾಷ್ಟ್ರದ, ಸಮಾಜದ ಪ್ರತಿ ಶಿಕ್ಷಕನ ಬೇಡಿಕೆ ಪತ್ರವಾಗಿದೆ. ಸಂಸದರೆಲ್ಲರೂ ಲೋಕಸಭೆಯಿಂದ ರಸ್ತೆಯವರೆಗೆ ಈ ಬೇಡಿಕೆಯನ್ನು ಈಡೇರಿಸುವ ನಿಟ್ಟಿನಲ್ಲಿ ಸಹಕರಿಸಿ ಕೆಲಸ ಮಾಡುತ್ತೇವೆ ಎಂದರು. ಧರಣಿ ಸತ್ಯಾಗ್ರಹದಲ್ಲಿ ವಿವಿಧ ಪಾರ್ಲಿಮೆಂಟ್ ಸದಸ್ಯರಾದ ಶ್ರೀ ಜೆ. ಪಿ. ನಡ್ಡ, ಶ್ರೀ ಶ್ರೀಪಾದನಾಯಕ, ಶ್ರೀ ಹಂಸರಾಜ ಆಹಿರ್, ಶ್ರೀ ಅವಿನಾಶ್‌ರಾಮ್ ಖನ್ನಾ, ಮುಂತಾದವರು ಧರಣಿಯ ಸ್ಥಳದಲ್ಲಿದ್ದು ಪ್ರೋತ್ಸಾಹ ನೀಡಿದರು.

ಮಹಾಸಂಘದ ಅಧ್ಯಕ್ಷರಾದ ಶ್ರೀ ವಿಮಲ್ ಪ್ರಸಾದ್ ಅಗರ್‌ವಾಲ್‌ರವರು 'ಶಿಕ್ಷಣದ ಪತನ ಶುರುವಾಗಿದೆ. ದೇಶ ಇದರಿಂದ ಬಲಹೀನವಾಗುತ್ತದೆಂಬ ಆತಂಕ ವ್ಯಕ್ತಪಡಿಸಿದರು. ಮಹಾಸಂಘದ ಪ್ರಧಾನ ಕಾರ್ಯದರ್ಶಿ ಶ್ರೀ ಜಗದೀಶ್ ಪ್ರಸಾದ್ ಸಿಂಘಲ್‌ರವರು ಬೇಡಿಕೆ ಪತ್ರದ 15 ಅಂಶಗಳನ್ನು ವಿವರಿಸಿ ದೇಶದಲ್ಲಿ ಶಿಕ್ಷಣ ವ್ಯಾಪಾರೀಕರಣವಾಗಿದೆ. ಸಾಮಾನ್ಯರಿಗೆ ನಿಲುಕದ ಶಿಕ್ಷಣವಾಗಿದೆ ಎಂದು ತಿಳಿಸಿದರು. ಶಿಕ್ಷಣದ ಅಭಿವೃದ್ಧಿಯಾಗಬೇಕಾದರೆ ಶಿಕ್ಷಕರು ಸಂಘಟಿತರಾಗಬೇಕೆಂದು ಮಹಾಸಂಘದ ಸಂಘಟನಾ ಕಾರ್ಯದರ್ಶಿ ಶ್ರೀ ಮಹೇಂದ್ರ ಕಪೂರ್‌ರವರು ಶಿಕ್ಷಕರಿಗೆ ಕರೆಕೊಟ್ಟರು. ಮಹಾಸಂಘದ ಪದಾಧಿಕಾರಿಗಳು, ಸದಸ್ಯರುಗಳು, ವಿಶ್ವವಿದ್ಯಾಲಯದ ಪ್ರಮುಖರು, ಶಿಕ್ಷಕರ ಬೇಡಿಕೆಯನ್ನು ಈಡೇರಿಸುವವರೆಗೆ ಹೋರಾಟವನ್ನು ಕೈ ಬಿಡುವಹಾಗಿಲ್ಲ ಎಂದು ನಿಶ್ಚಯಿಸಿದರು. ಧರಣಿಯ ಜೊತೆಗೆ ಭಾರತೀಯ ಜೀವನ ಮೌಲ್ಯಗಳು, ಚಾರಿತ್ರ್ಯ ನಿರ್ಮಾಣ, ಸಾಮಾಜಿಕ ಬದ್ಧತೆ, ಮೌಲಿಕ ಚಿಂತನ, ಸದಾಚಾರ ಇವುಗಳನ್ನು ಪ್ರತಿನಿಧಿಸುವ ರಾಷ್ಟ್ರ ಪುನರ್ ನಿರ್ಮಿಸುವ ದಿಕ್ಕಿನಲ್ಲಿ ಶಿಕ್ಷಣದ ರಚನೆಯಾಗಬೇಕು. ಇದಕ್ಕಾಗಿ ಶೈಕ್ಷಣಿಕ ಚಿಂತಕರು, ಶಿಕ್ಷಕ ಪ್ರತಿನಿಧಿಗಳಿಂದ ಕೂಡಿದ ಸೂಕ್ತ ನಿಯಮಾವಳಿ ಹೊಂದಿರುವ ಸ್ವತಂತ್ರ ಶಿಕ್ಷಣದ ಆಯೋಗವನ್ನು ರಚಿಸಬೇಕೆಂದೂ, ರಾಷ್ಟ್ರದ ಆಯ–

(9ನೇ ಪುಟಕ್ಕೆ.....)

ಅಧ್ಯಕ್ಷರ ಫ್ಯಾಕ್ಸ್‌ನಿಂದ.........

ಕೆ. ಬಾಲಕೃಷ್ಣ ಭಟ್, Ex. MLC, ಅಧ್ಯಕ್ಷರು, ಶಿಕ್ಷಕ ಸಂಘ

# ನಾಯಕತ್ವದ ಗುಣಲಕ್ಷಣಗಳು

"ನಾಯಕ" ಶಬ್ದಕ್ಕೆ ಇಂಗ್ಲೀಷಿನಲ್ಲಿ 'Leader' ಎನ್ನುತ್ತಾರೆ. ಇದರ ಅರ್ಥ "One who leads" ಎಂದು. ಈ ಅರ್ಥದಲ್ಲಿ ಒಂದು ಶಾಲೆಗೆ ಮುಖ್ಯೋಪಾಧ್ಯಾಯನೇ ನಾಯಕ. ಮನೆಗೆ ಯಜಮಾನ ನಾಯಕ. ಅದೇ ರೀತಿ ಶಾಲೆಗೆ ಮುಖ್ಯೋಪಾಧ್ಯಾಯ ಮತ್ತು ತರಗತಿಗೆ ಶಿಕ್ಷಕನೇ ನಾಯಕ. ಮನೆಯನ್ನು ಸಂಭಾಳಿಸಿಕೊಂಡು ಚೆನ್ನಾಗಿ ಮುನ್ನಡೆಸುವವನೇ ಅದರ ಯಜಮಾನ. ಅದೇ ರೀತಿ ಶಾಲೆಯನ್ನು ಸಂಭಾಳಿಸಿಕೊಂಡು ಮುನ್ನಡೆಸುವವನು ಮುಖ್ಯ ಶಿಕ್ಷಕ. ನಾಯಕ ವಯಸ್ಸಿನಲ್ಲಿ ಚಿಕ್ಕವನಾಗಿದ್ದರೂ ಶಾಲೆಯ ಯಜಮಾನಿಕೆಯನ್ನು ನಾಯಕತ್ವವನ್ನು ವಹಿಸಿ ಮುನ್ನಡೆಸುವವನಿಗೆ ಈ ನಾಯಕ ಪಟ್ಟ.

ಸಮರ್ಥ ಹಾಗೂ ಯೋಗ್ಯ ವ್ಯಕ್ತಿಯ ಕೈಯಲ್ಲಿ ಮನೆ, ಶಾಲೆ ಹಾಗೂ ದೇಶ ಸುರಕ್ಷಿತವಾಗಿರುತ್ತದೆ. ಅಂತೆಯೇ ದುಷ್ಟ, ಭ್ರಷ್ಟ ಅಹಂಕಾರಿ ವ್ಯಕ್ತಿ ನಾಯಕನಾದರೆ ಆ ಶಾಲೆ, ಆ ಸಂಸ್ಥೆ ಕಂಟಕಕ್ಕೆ ಒಳಗಾಗುತ್ತದೆ.

ಸಮರ್ಥ ಹಾಗೂ ಯೋಗ್ಯ ವ್ಯಕ್ತಿಯ ಕೈಯಲ್ಲಿ ಮನೆ, ಪಕ್ಷ ಅಥವಾ ದೇಶ ಸುರಕ್ಷಿತವಾಗಿರುತ್ತದೆ. ಅಂತೆಯೇ ದುಷ್ಟ, ಭ್ರಷ್ಟ, ಅಹಂಕಾರಿ ವ್ಯಕ್ತಿ ನಾಯಕನಾದರೆ ಆ ಸಂಸ್ಥೆ, ಆ ಪಕ್ಷ, ಆ ದೇಶ ಕಂಟಕಕ್ಕೆ ಒಳಗಾಗುತ್ತದೆ. ತಾನು ಮಾತ್ರವಲ್ಲ ತನ್ನ ಅಕ್ಕ ಪಕ್ಕದವರೂ, ಬಂಧುಗಳೂ ತೊಂದರೆಗೊಳಗಾಗುತ್ತಾರೆ.

ನಾಯಕನಲ್ಲಿ ನಾವು ಕಾಣಬಯಸುವ ಗುಣ ವಿಶೇಷಗಳೇನು? ಅಥವಾ ಯಾವ ಗುಣಗಳನ್ನು ಬೆಳೆಸಿಕೊಂಡರೆ ಯೋಗ್ಯ ನಾಯಕನೆನಿಸಬಹುದು ಎಂದು ತಿಳಿಯುವುದು ಉಚಿತವೆನಿಸಬಹುದು. ಮೊದಲಿಗೆ ಸಮರ್ಥನಾಯಕನೆನಿಸಿಕೊಳ್ಳುವವನಲ್ಲಿರಬೇಕಾದ ಗುಣಗಳನ್ನು ಪಟ್ಟಿ ಮಾಡೋಣ:

## ಧನಾತ್ಮಕ ಗುಣಗಳು

- ಶುದ್ಧಚಾರಿತ್ರ್ಯ
- ಅಹಂ ಇಲ್ಲದಿರುವುದು
- ಪರಿಶ್ರಮಶೀಲತೆ; ವಿವೇಕ, ಜ್ಞಾನ ಮತ್ತು ಸತ್ಯಸಂಧತೆ;
- ಪ್ರಾಮಾಣಿಕತೆ
- ಸಂವಹನ ಕೌಶಲ್ಯ
- ಸಂವಾದಕ್ಕೆ ತೆರೆದುಕೊಳ್ಳುವುದು
- ಎಲ್ಲರೊಡನೆ ಸಂಪರ್ಕ ಸಾಧಿಸುವುದು
- ವ್ಯಕ್ತಿ ಮತ್ತು ಸನ್ನಿವೇಶಗಳನ್ನು ಸರಿಯಾಗಿ ತೂಗಿ ನೋಡುವ ಸಾಮರ್ಥ್ಯ
- ಪ್ರಸಂಗಾವಧಾನತೆ
- ಅವಶ್ಯಕತೆ, ಸಾಮರ್ಥ್ಯ ಮತ್ತು ಸಂದರ್ಭ ನೋಡಿ ಕಾರ್ಯ ಯೋಜಿಸುವುದು
- ಗಹನ ಸ್ವರಭಾರ
- ಶಾಂತ, ಗಂಭೀರ ಸ್ವಭಾವ
- ನಡೆ – ನುಡಿಯಲ್ಲಿ ಅಂತರವಿಲ್ಲದಿರುವುದು
- ಹಾಸ್ಯ ಪ್ರಜ್ಞೆ ; ಸ್ವಯಂ ಟೀಕೆ ;
- ಸೂಕ್ತ ನಿರ್ಣಯ ಪ್ರಕ್ರಿಯೆ
- ಅಪರಿಮಿತ ತಾಳ್ಮೆ, ಛಲ, ಮತ್ತು ಸಂಯಮ
- ಮುಖದಲ್ಲಿ ಸದಾ ನಗು, ಕೃತಕತೆ ಬೇಡ
- ಕಾರ್ಯದಲ್ಲಿ ಸಾತತ್ಯ ಮತ್ತು ನಿರಂತರತೆ
- ಸಹಕಾರಿಗಳನ್ನು ವಿಶ್ವಾಸದಿಂದ ಕಾಣುವುದು
- ಒಳ ಮನಸ್ಸನ್ನು ಪ್ರಕಟಗೊಳಿಸದಿರುವುದು
- ಸಂಕೋಚಬೇಕು – ಹಿತಮಿತ
- ಸುಂದರ ಕೈಬರಹ (ಅನಿವಾರ್ಯವೆಂದೇನೂ ಅಲ್ಲ)
- ಯೋಗ್ಯತೆ – ಕ್ಷಮತೆ ನೋಡಿ ಕೆಲಸ ಹಂಚುವುದು, ಕೆಲಸಕ್ಕೆ ಹಚ್ಚುವುದು
- ಇತರರನ್ನು ಪ್ರೀತಿಯಿಂದ ಕಾಣುವುದು
- ಸಮಯ ಪಾಲನೆ ಮತ್ತು ಸಮಯದ ಸೂಕ್ತ ಯೋಜನೆ
- ದೂರದೃಷ್ಟಿಯಿರುವುದು

(7ನೇ ಪುಟಕ್ಕೆ.....)

5ನೇ ಪುಟದಿಂದ..... **ನಾಯಕತ್ವ**

- ವೇಷಭೂಷಣ – ಹಾವಭಾವಗಳಲ್ಲಿ ಸರಳತೆ ಮತ್ತು ಶುದ್ಧತೆ
- ಪ್ರತ್ಯುತ್ಪನ್ನ ಮತಿತ್ವ
- ಮಿತವ್ಯಯ ಪಾಲನೆ
- ತನ್ನಂತೆ ಪರರ ಬಗೆಯುವುದು
- ಮಾಹಿತಿ ಕೋಶವಾಗಿರುವುದು
- Institution first (ಸಂಸ್ಥೆ ಹಿತಕ್ಕೆ ಸರ್ವಾಧಿಕ ಆದ್ಯತೆ.)
- ಆತ್ಮವಿಶ್ವಾಸ (ಅತಿ ಆಗಬಾರದು)
- ಕೈ, ಬಾಯಿ, ಶುದ್ಧ ಇರುವುದು
- ಸಿದ್ಧಿ – ಪ್ರಸಿದ್ಧಿಯಲ್ಲಿ ಸಮತೋಲನ/ ಯೋಗ್ಯ ಸಮರ್ಥ ಸಲಹಾಗಾರರನ್ನು ಇಟ್ಟುಕೊಳ್ಳುವುದು
- ಸದಾಕ್ರಿಯಾಶೀಲ; ಕಾರ್ಯಕ್ಷಮತೆ, Accountability ಇರುವುದು

## ಋಣಾತ್ಮಕ ಗುಣಗಳು

- ವಾಚಾಳಿತನ, ಚುಚ್ಚುಮಾತು
- ದುಂದುವೆಚ್ಚ
- ಸ್ವಜನ ಪಕ್ಷಪಾತ
- ಅಸೂಯೆ, ಮತ್ಸರ, ಅಹಂಕಾರ;
- ಸೋಮಾರಿತನ, ಜಾಡ್ಯ
- ಆತ್ಮ ಪ್ರಶಂಸೆ ಮತ್ತು ಪರನಿಂದೆ
- ಅಪ್ರಾಮಾಣಿಕತೆ
- ಋಣಾತ್ಮಕ ಚಿಂತನೆ, ಋಣಾತ್ಮಕ ಕಾರ್ಯ
- ಪ್ರಚಾರಪ್ರಿಯತೆ
- ದುರ್ವ್ಯಸನಗಳು

ಒಟ್ಟೂ ಗುಣಗಳನ್ನು ಧನಾತ್ಮಕ ಗುಣಗಳು ಮತ್ತು ಋಣಾತ್ಮಕ ಗುಣಗಳೆಂದು ವಿಭಜಿಸಬಹುದು.

ಯಾವ ಗುಣ ವಿಶೇಷಗಳು ಯೋಗ್ಯ ನಾಯಕ ನೆನಿಸುವನಲ್ಲಿ ಇರುವುದೋ ಅತ್ಯಂತ ಅವಶ್ಯವೋ ಅವುಗಳನ್ನು ಧನಾತ್ಮಕಗುಣಗಳೆನ್ನಬಹುದು. ನಾಯಕನಲ್ಲಿ ಮಾತ್ರವಲ್ಲ ಯಾವನೇ ವ್ಯಕ್ತಿಯಲ್ಲಿಯೂ ಇರಬಾರದವು ಗಳೆಂದು ಹೇಳಬಹುದಾದ ಸಂಗತಿಗಳನ್ನು ಋಣಾತ್ಮಕ ಗುಣಗಳೆಂದು ಕರೆಯಬಹುದು.

ಧನಾತ್ಮಕ ಗುಣಗಳ ಪಟ್ಟಿಯಲ್ಲಿ ಮೊದಲನೆಯ ಗುಣವೇ ಶುದ್ಧ ಚಾರಿತ್ರ್ಯ ಮಿಕ್ಕೆಲ್ಲ ಗುಣಗಳಿದ್ದೂ ಶುದ್ಧಚಾರಿತ್ರ್ಯ ವಿಲ್ಲದಿದ್ದಲ್ಲಿ ಅವನು ಯೋಗ್ಯನಾಯಕನೆನಿಸಲಾರ.

ತಾನೇ, ತನ್ನಿಂದಲೇ ಎಲ್ಲವೂ ಎನ್ನುವ ಮನಸ್ಥಿತಿ ಇರಲೇಬಾರದು.

## ಪಂಚ 'ವಕಾರ'ಗಳು

ವ್ಯಕ್ತಿಗೆ ಗೌರವ ತಂದುಕೊಡುವ 5 ಸಂಗತಿಗಳನ್ನು ಸಂಸ್ಕೃತದ ಒಂದು ಶ್ಲೋಕ ಹೀಗೆ ಪಟ್ಟಿ ಮಾಡುತ್ತದೆ.

**ವಸ್ತ್ರೇಣ ವಪುಷಾ ವಾಚಾ ವಿದ್ಯಯಾ ವಿನಯೇನವಾ ।**
**ವಕಾರೈಃ ಪಂಚಭಿರ್ಹೀನಃ ನರೋನಾಯಾತಿಗೌರವಮ್॥**

ಅಂದರೆ ವಸ್ತ್ರ (ವೇಷಭೂಷಣ), ವಪು (ದೇಹ–ಸೌಷ್ಠವ) ವಾಕ್ (ಮಾತು) ವಿದ್ಯೆ ಮತ್ತು ವಿನಯ. ಈ ಐದು ವಕಾರಗಳು ಯಾರಲ್ಲಿ ಇರುತ್ತವೋ ಅವನು ಗೌರವಕ್ಕೆ ಪಾತ್ರನಾಗುತ್ತಾನೆ ಎಂದು ಇದರ ಅರ್ಥ. ಈ 5 ವಕಾರಗಳಲ್ಲಿ ಆದ್ಯತೆ ದೃಷ್ಟಿಯಿಂದ ಹಿಂದಿನಿಂದ ಮುಂದಕ್ಕೆ ಓದುತ್ತಿರಬೇಕು. ಅಂದರೆ ಈ ಐದು ವಿಷಯಗಳ ಪೈಕಿ ಅತ್ಯಂತ ಮಹತ್ವದ್ದೆಂದರೆ ವಿನಯವೆಂದಾಯಿತು. ಮಿಕ್ಕ ನಾಲ್ಕು ಸಂಗತಿಗಳು ಸಾಕಷ್ಟು ಇದ್ದರೂ ಕೊನೆಯದಾದ ವಿನಯವಿಲ್ಲದಿದ್ದಲ್ಲಿ ಆತನಿಗೆ ಗೌರವ ಪ್ರಾಪ್ತವಾಗದು ಎಂದು ಅದರ ಅರ್ಥ. ಆದ್ದರಿಂದ ಈ 5 ಗುಣಗಳು ತಿರುವು ಮುರುವಾಗಿರುವ ಆದ್ಯತೆಯಲ್ಲಿದ್ದರೆ ಚೆನ್ನ ಅಂದ ಹಾಗಾಯಿತು.

ಒಂದು ಶಾಲೆಯ ಏಳು–ಬೀಳುಗಳು ಅಲ್ಲಿನ ಮುಖ್ಯ ಶಿಕ್ಷಕರನ್ನೇ ಅವಲಂಬಿಸಿದೆ. ಅವನಲ್ಲಿ ಮೇಲೆ ಹೇಳಿದ ಎಲ್ಲಾ ಗುಣಗಳು ಇದ್ದಲ್ಲಿ ಅವನ ಸಹಕಾರಿಗಳಿಗೆ ಅವನಲ್ಲಿ ಗೌರವ ಬೆಳೆಯುತ್ತದೆ. ಅವರಿಗೆಲ್ಲಾ ಅವನು ರೋಲ್ ಮಾಡೆಲ್ ಆಗುತ್ತಾನೆ. ಅವನು ಏನನ್ನೂ ಹೇಳದೆಯೇ ಶಾಲೆಯ ಕೆಲಸ ಕಾರ್ಯಗಳು ಸುಸೂತ್ರವಾಗಿ ಸಾಗುತ್ತವೆ. ಮತ್ತು ಅವನನ್ನು ಅನುಸರಿಸುವ ಶಿಕ್ಷಕರ ಸಮೂಹ ನಿರ್ಮಾಣವಾಗುತ್ತದೆ. ಇಂಥ ಶಿಕ್ಷಕರು ಶಾಲೆಯಲ್ಲಿ ಇದ್ದರೆ ಅಂಥ ಶಾಲೆಯಿಂದ ಉತ್ತಮ ವಿದ್ಯಾರ್ಥಿಗಳು ತಯಾರಾಗಿ ಬರುತ್ತಾರೆ.

ಸ್ವಾತಂತ್ರ್ಯಪೂರ್ವದಲ್ಲಿ ನಮ್ಮ ನಾಡಿನಲ್ಲಿ ಇಂಥ ಹಲವು ಮಾದರಿ ಶಾಲೆಗಳು ಇದ್ದವು. ಅಲ್ಲಿನ ಮುಖ್ಯ ಶಿಕ್ಷಕರು, ಶಿಕ್ಷಕರ ತಂಡವು ವಿದ್ಯಾರ್ಥಿಗಳಿಗೆ ಮಾದರಿಯಾಗಿದ್ದರು. ಆ ಶಿಕ್ಷಕರಲ್ಲಿ ಹಲವರು ಸ್ವಾತಂತ್ರ್ಯ ಚಳವಳಿಯಲ್ಲೂ ಭಾಗವಹಿಸಿ ನೋವುಂಡರು. ಆದರೆ ಇತ್ತೀಚೆಗೆ ಇಂಥ

(10ನೇ ಪುಟಕ್ಕೆ.....)



# ಆತ್ಮ ಶ್ರದ್ಧೆಯನ್ನು ಬದುಕಿಸಿದ ಚೈತನ್ಯ

ನಮ್ಮ ಹೊಸ ಪ್ರಪಂಚದ ಪ್ರಶ್ನೆಗಳಿಗೆ ಉತ್ತರಕೊಟ್ಟು ಬಾಳುವಷ್ಟು ಜೀವಾಳವು ಪುರಾತನವಾದ ಹಿಂದೂ ಧರ್ಮದಲ್ಲಿರುವುದೇ ? ಪಾಶ್ಚಾತ್ಯರ ವಿದ್ಯೆ ಚಮತ್ಕಾರಗಳೆದುರಿಗೆ ತಲೆಯೆತ್ತಿ ನಿಲ್ಲುವಷ್ಟರ ಬೆನ್ನುಮೂಳೆಯು ಈ ಅರ್ಷಸಂಸ್ಕೃತಿಗಿರುವುದೇ? ನಲವತ್ತು ವರ್ಷಗಳ ಹಿಂದೆ ಪ್ರಪಂಚವು ಈ ಪ್ರಶ್ನೆಯನ್ನು ಕೇಳುತ್ತಿತ್ತು ಆಗ ಆ ಪ್ರಶ್ನೆಯನ್ನು ಧೈರ್ಯದಿಂದ ದಿಟ್ಟಿಸಿನೋಡಿ, ಹೌದು, ಅದಕ್ಕೆ ಉಂಟು ಎಂದು ಘಂಟಾಘೋಷವಾಗಿ ಪ್ರಪಂಚವೆಲ್ಲವೂ ಕೇಳುವಂತೆ ಪ್ರತ್ಯುತ್ತರ ಕೊಡಲು ಶ್ರೀ ವಿವೇಕಾನಂದ ಸ್ವಾಮಿಗಳವರು ಎದ್ದು ನಿಲ್ಲದೆ ಹೋಗಿದ್ದರೆ, ಹಿಂದೂ ಸಮಾಜವು ಇಂದು ಆಗಿನಷ್ಟಾದರೂ ನೂತನ ಚೇತನವನ್ನು ತೋರುವುದಕ್ಕೆ ಪ್ರತಿಯಾಗಿ ಮತ್ತಷ್ಟು ಕಳೆಗುಂದಿರುತ್ತಿತ್ತೆಂಬುದಕ್ಕೆ ಸಂಶಯವಿಲ್ಲ. ಲೋಕದಲ್ಲಿ ಯಾರ ಬಲವೂ ಒಂದು ಪ್ರಾಣಿಯದೇ ಆಗಲಿ, ಒಂದು ಸಮಾಜದ್ದೇ ಆಗಲಿ ಒಂದು ಕ್ಷಣವಿದ್ದಂತೆ ಮರುಕ್ಷಣವಿರಲಾರದು. ಬಲವು ಹೆಚ್ಚುತ್ತಿರಬೇಕು, ಇಲ್ಲವೇ ತಗ್ಗುತ್ತಿರಬೇಕು. ವಿವೇಕಾನಂದರ ಕಾಲಕ್ಕೆ ಹಿಂದೆ ಒಂದು ಮಹಾಶಂಕೆ ಒಂದು ಮರಣಭೀತಿ– ಹಿಂದೂ ಸಮಾಜದ ಎದೆಗೆ ತಟ್ಟಿತ್ತು. ಅವರು ಆ ಭಯಕ್ಕೆ ಕಾರಣವಿಲ್ಲವೆಂದು ಭರವಸೆ ತೋರಿ ಸಮಾಜದ ಆತ್ಮಶ್ರದ್ಧೆಯನ್ನು ಮರಳಿ ಬದುಕಿಸಿ ಅದರ ಬಲೋತ್ಕರ್ಷಕ್ಕೆ ದಾರಿ ಮಾಡಿ, ಆಯುರೇಖೆಯನ್ನು ವಿಸ್ತಾರಪಡಿಸಿದರು.

ಹೀಗೆ ಸಮಸ್ತ ಸಮಾಜಕ್ಕೆ ಆಯುರ್ದಾನ ಮಾಡುವ ಮಹಾಕಾರ್ಯದ ಉಪಾಂಗವಾಗಿ ಇತರ ಮತಗಳಿಗೂ ಅವರಿಂದ ಒಂದು ಉಪಕಾರ ನಡೆಯಿತು. ತಮ್ಮ ವೈದಿಕಪರಪಂಥಿಯು ಸತ್ತವನೆಂದು ಇತರ ಮತಗಳು ತಿಳಿಯಲಾಗದು. ಆ ಇತರ ಮತಗಳು ವಿಚಾರಮಾಡಬೇಕಾದ ಪ್ರಶ್ನೆಗಳೂ ಕಲಿಯಬೇಕಾದ ತತ್ತ್ವಗಳೂ ಇನ್ನೂ ಎಷ್ಟೋ ಇವೆ. ಈ ಭಾಗದಲ್ಲಿ ಅವುಗಳಿಗೆ ಹಿಂದೂಮತದಿಂದ ಸಹಾಯ ದೊರೆತೀತು. ಹೀಗೆಂದು ವಿವೇಕಾನಂದರು ಅನ್ಯಮತಗಳಿಗೂ ಎಚ್ಚರಿಕೆ ಕೊಟ್ಟು ಅವುಗಳ ಆತ್ಮಪರಿಶೋಧನೆಗೆ ದಾರಿತೋರಿದರು.

ವೇದವೇದಾಂತಗಳ ಕೊಂಡಾಟದಿಂದಲೇ ತೃಪ್ತರಾದ ಮಾತಾಭಿಮಾನಿ ಅವರಲ್ಲ. ವೈದಿಕ ತತ್ವಗಳು ಮೇರುಪರ್ವತದಂತಿದ್ದರೇನು; ವೇದಮಾರ್ಗಿಗಳೆಂದು ಹೇಳಿಕೊಳ್ಳುವವರ ಜೀವನವು ಪಾಚಿ ಬೆಳೆದ ಹಳ್ಳದ ನೀರಿನಂತಿರುವವರೆಗೂ ಅವರಿಗೆ ಉಳಿಗಾಲವೇ ಇಲ್ಲವೆಂಬುದನ್ನು ವಿವೇಕಾನಂದರು ಮರೆಯಲಿಲ್ಲ. ಹಿಂದೂ ಸಮಾಜವು ತನ್ನ ತಪೋನಿದ್ರೆಯಿಂದ ಏಳಬೇಕು. ಕಣ್ತೆರೆದು ಸುತ್ತುಮುತ್ತಲಿನ ಪ್ರಪಂಚವನ್ನು ನೋಡಬೇಕು. ಕೈಕಾಲುಗಳನ್ನು ಕೊಡಹಿ ಓಡಾಡಿಸಬೇಕು. ಜಡತೆಯೇ ಶಾಂತಿಯೆಂದೆಂಬುದನ್ನೂ ಜೀರ್ಣತೆಯೇ ಪೂಜ್ಯತೆಯೆಂಬುದನ್ನೂ ಬಿಡಬೇಕು. ಕೊಳಕು ಹಣ್ಣುಗಳನ್ನು ತೋಳೆಯಬೇಕು. ಮಣಕು ಬೊಂತೆಗಳನ್ನು ಬಿಸಾಡಬೇಕು. ಕಿಟಕಿ ಬಾಗಿಲುಗಳನ್ನು ತೆರೆದು ಹೊರಗಿನ ಹೊಸ ಗಾಳಿ ಬೆಳಕುಗಳನ್ನು ತನ್ನ ಮನೆಯೊಳಕ್ಕೆ ಬರಮಾಡಿಕೊಳ್ಳಬೇಕು. ಇದು ಸಾರ್ಥಕವಾಗುವ ಬದುಕಿನ ದಾರಿ. ಹೀಗೆಂದು ಸಾರಿ ಸಮಾಜ ಸುಧಾರಣೆಗಳ ಅವಶ್ಯಕತೆಯನ್ನು ತೋರಿಸಿಕೊಡಲು, ವಿವೇಕಾನಂದರು ಸ್ವಲ್ಪವೂ ಹಿಂಜರಿದವರಲ್ಲ. ಸ್ವಧರ್ಮದ ಶ್ರೇಷ್ಠತೆಯನ್ನು ಪ್ರಕಾಶಪಡಿಸಲು ಉತ್ಸಾಹಿಗಳಾಗಿದ್ದಂತೆ, ಸಮಾಜದ ದೋಷ ದೌರ್ಬಲ್ಯಗಳನ್ನು ತೋರಿಸಿಕೊಡುವುದಕ್ಕೂ ಅವರು ಮುಂದಾಳಾಗಿದ್ದರು. ಈ ಮುಮ್ಮೊಗದ ಕೆಲಸಕ್ಕೆ ಬೇಕಾಗಿದ್ದ ಯೋಗ್ಯತೆ, ಸುಸಂಸ್ಕೃತಪಾಂಡಿತ್ಯ ಮಾತ್ರವಲ್ಲ, ಇಂಗ್ಲೀಷ್ ವಾಕ್ಪಟುತ್ವ ಮಾತ್ರವಲ್ಲ, ಧರ್ಮಾಭಿಮಾನ ಮಾತ್ರವಲ್ಲ. ಈ ಶಕ್ತಿಗಳೆಲ್ಲವೂ ಬೇಕಿದ್ದವು. ಅವುಗಳ ಜೊತೆಗೆ ಇನ್ನೂ ಕೆಲವು ಅಧಿಕಾರಗಳು ಅವಶ್ಯವಿದ್ದವು. ಅವುಗಳಲ್ಲೆಲ್ಲಾ ದೊಡ್ಡದು ಧರ್ಮಮೂಲದ ನಿಶ್ಚಯಜ್ಞಾನ ಮತ್ತು ಅಂಥ ನಿಶ್ಚಯಜ್ಞಾನದೊಡನೆ ಬರುವ ಗಂಡೆದೆಯ ಧೈರ್ಯ. ಸ್ವಾಮಿ

(8ನೇ ಪುಟಕ್ಕೆ.....)

# ಸ್ವದೇಶಿ ಪಾಲನೆಯಿಂದ ಸ್ವಾವಲಂಬಿ ಭಾರತ

**ಸ್ವಾಮಿ ಬಾಬಾ ರಾಮ್‌ದೇವ್‌ರವರು ಕೇವಲ ಸಂನ್ಯಾಸಿಗಳಲ್ಲ. ಸ್ವಾಮಿ ವಿವೇಕಾನಂದರ ಆದರ್ಶದಂತೆ ಬ್ರಹ್ಮತೇಜ ಮತ್ತು ಕ್ಷಾತ್ರ ತೇಜ ಎರಡನ್ನೂ ಹೊಂದಿದವರು. ತಾಯಿ ಭಾರತಿಯ ಸೇವೆಯೇ ದೇವರ ಪೂಜೆ ಎಂದು ಭಾವಿಸಿದವರು. ಅವರ ಮಾತುಗಳಲ್ಲಿ ಬೆಂಕಿಯ ಚೆಂಡಿದೆ. ಅವರು ಸ್ವದೇಶಿಯ ಆರಾಧಕರು. ಅವರ ಭಾಷಣ ಮಾಲೆಯಿಂದ ಈ ಕೆಳಗಿನ ಲೇಖನವನ್ನು ಆರಿಸಿದೆ.**

ಸ್ವದೇಶಿ ಉದ್ಯೋಗ, ಸ್ವದೇಶಿ ಶಿಕ್ಷಣ, ಸ್ವದೇಶೀ ಚಿಕಿತ್ಸಾ ಪದ್ಧತಿ, ಸ್ವದೇಶಿ ತಾಂತ್ರಿಕತೆ, ಸ್ವದೇಶಿ ಜ್ಞಾನ, ಸ್ವದೇಶಿ ಊಟ ತಿಂಡಿ, ಸ್ವದೇಶಿ ಭಾರತೀಯ ಭಾಷೆ, ಸ್ವದೇಶೀ ವೇಶಭೂಷಣ ಮತ್ತು ಸ್ವದೇಶದ ಸ್ವಾಭಿಮಾನವಿಲ್ಲದೆ ವಿಶ್ವದ ಯಾವುದೇ ದೇಶ ಮಹಾನ್ ಆಗಲು ಸಾಧ್ಯವಿಲ್ಲ.

ಸ್ವದೇಶಿ ಆಂದೋಲನದಿಂದ ಪ್ರತಿಯೊಬ್ಬ ಭಾರತೀಯನನ್ನು ಮತ್ತು ಸಂಪೂರ್ಣ ಭಾರತವನ್ನು ಸ್ವಾವಲಂಬಿಯನ್ನಾಗಿ ಮಾಡಿ, ಭಾರತವು ವಿಶ್ವದ ಅತ್ಯಂತ ಶಕ್ತಿ ಶಾಲಿ ದೇಶಗಳ ಸಾಲಿನಲ್ಲಿ ಇರಲೆಂದು ಬಯಸುತ್ತಿದ್ದೇವೆ.

ನಾವು ಶಿಕ್ಷಣ ಚಿಕಿತ್ಸೆಗಳಲ್ಲಿ ಸಂಪೂರ್ಣ ಸ್ವದೇಶಿ ಭಾಷೆ, ಸ್ವದೇಶಿ ಸಂಸ್ಕೃತಿ, ಭಾರತೀಯ ಸಂಸ್ಕಾರ, ವೈದಿಕ ಜ್ಞಾನ ಹಾಗೂ ದೇಶದ ಸ್ವಾಭಿಮಾನವನ್ನು ಭಾರತದ ಜನಮಾನಸದಲ್ಲಿ ಜಾಗೃತಿಗೊಳಿಸಿ, ಸಂಪೂರ್ಣ ವಿಶ್ವದಲ್ಲಿ ಒಂದು ಆದರ್ಶ ಭಾರತದ ಪರಿಚಯ ಮಾಡಬಯಸುತ್ತಿದ್ದೇವೆ. 1611ರಲ್ಲಿ ಮಚಲೀಪಟ್ಟನಂನಲ್ಲಿ (ಆಂದ್ರಪ್ರದೇಶ) ಮತ್ತು 11ನೇ ಜನವರಿ 1613ರಲ್ಲಿ ಸೂರತ್ (ಗುಜರಾತ್) ನಲ್ಲಿ ಮೊಗಲ್ ಶಾಸಕರು ಒಂದು ವಿದೇಶಿ ಕಂಪನಿಗೆ ವ್ಯಾಪಾರ ಮಾಡಲಿಕ್ಕೆ ಅಧಿಕಾರ ನೀಡಿದ್ದರು. ಅದರಿಂದಾಗಿ ಆ ಕಂಪನಿಯವರು ನಿಧಾನವಾಗಿ ದೇಶದ ಶೋಷಣೆ ಮಾಡುತ್ತ, ತಮ್ಮ ಬೇರುಗಳನ್ನು ಗಟ್ಟಿಮಾಡಿಕೊಂಡರು. ಬಂಗಾಳದಲ್ಲಿ 1757ರಲ್ಲಿ ಪ್ಲಾಸಿ ಕದನ ಗೆದ್ದು, ತೆರಿಗೆಯ ಕೆಲಸ ಆರಂಭಿಸಿದರು. 1769–70ರ ಬಂಗಾಳದ ಭೀಕರ ಬರಗಾಲದಲ್ಲಿ ಈ ಕಂಪನಿಗಳು ಪೀಡಿತರಿಗೆ ಸಹಾಯ ಮಾಡುವುದಿರಲಿ ಬದಲಿಗೆ ಇನ್ನಷ್ಟು ತೊಂದರೆಯನ್ನೇ ನೀಡಿದರು. ದೇಶದಲ್ಲಿ ಕ್ಷಾಮವಿದ್ದರು ಕೂಡ ಈ ವಿದೇಶಿ ಕಂಪನಿಗಳು ಸಾಕಷ್ಟು ಲಾಭ ಗಳಿಸಿದ್ದವು. ತಮ್ಮ ದುಷ್ಟತನದಿಂದ 1773ರಲ್ಲಿ ರೆಗ್ಯುಲೇಟರಿ ಆಕ್ಟ್ ನ ಸಹಾಯದಿಂದ ಭಾರತದ ಬಂಗಾಳಕ್ಷೇತ್ರದಲ್ಲಿ ಶಾಸನ ಆರಂಭಿಸಿದರು. ಅಂದರೆ ಒಂದು ವಿದೇಶಿ ವ್ಯಾಪಾರಿ ಕಂಪನಿ ನೋಡ ನೋಡುವಷ್ಟರಲ್ಲಿ ಶಾಸನ ಮಾಡಲಾರಂಭಿಸಿತು. 1615ರಲ್ಲಿ ಈಸ್ಟ್ ಇಂಡಿಯಾ ಕಂಪನಿಯ ಮೊದಲ ಏಜೆಂಟ್ ಥಾಮಸ್ ರೋ ನಿಂದ ಪ್ರಾರಂಭವಾಗಿ ಪ್ರಥಮ ಗೌರ್ವನರ್ ಜನರಲ್ ವಾರನ್ ಹೆಸ್ಟಿಂಗ್‌ನಿಂದ ಹಿಡಿದು ಕೊನೆಯ ಗೌರ್ವನರ್ ಜನರಲ್ ಮೌಂಟ್ ಬ್ಯಾಟನ್‌ವರೆಗೆ ಒಂದು ವಿದೇಶೀ ಕಂಪನಿ ಸುಮಾರು 350 ವರ್ಷಗಳ ವರೆಗೆ ದೇಶದ 278 ಲಕ್ಷ ಕೋಟಿ ರೂಪಾಯಿಗಳ ಸಂಪತ್ತನ್ನು ಲೂಟಿ ಮಾಡಿತು. ಪ್ರಥಮ ವಿದೇಶಿ ಕಂಪನಿ ಈಸ್ಟ್ ಇಂಡಿಯಾ ದೇಶದ ಸಂಪೂರ್ಣ ಹಣ ಹಾಗೂ ವೈಭವನ್ನು ಲೂಟಿ ಮಾಡಿತಷ್ಟೇ ಅಲ್ಲದೆ ಜೊತೆಗೆ ಭಾರತವನ್ನು ಸುಮಾರು 200 ವರ್ಷಗಳ ವರೆಗೆ ಗುಲಾಮ ದೇಶವನ್ನಾಗಿಯೂ ಮಾಡಿತು. ಇಂದೂ ಕೂಡ ದೇಶದಲ್ಲಿಯ ಸುಮಾರು 5 ಸಾವಿರಕ್ಕಿಂತ ಅಧಿಕ ವಿದೇಶೀ ಕಂಪನಿಗಳು ಶೂನ್ಯ ತಾಂತ್ರಿಕತೆ ಅಂದರೆ ಯಾವು ವಸ್ತುಗಳಲ್ಲಿ ವಿಶೇಷ ತಾಂತ್ರಿಕತೆಯ ಅವಶ್ಯಕತೆ ಇಲ್ಲವೋ ಅಥವಾ ವಿಜ್ಞಾನದ ಉಪಯೋಗವಿಲ್ಲವೋ ಅಂತಹಾ ವಸ್ತುಗಳನ್ನು: ಹಿಟ್ಟು, ಉಪ್ಪು. ನೀರು. ತಂಪುಪಾನೀಯ, ಜ್ಯೂಸ್, ಚಿಪ್ಸ್, ಸಾಬೂನ್, ಎಣ್ಣೆ, ಕ್ರೀಮು, ಚಪ್ಪಲಿ, ಬಟ್ಟೆ ಇತ್ಯಾದಿಗಳನ್ನು ಮಾರಿ ದೇಶದ ಲಕ್ಷಾಂತರ, ಕೋಟ್ಯಾಂತರ ರೂಪಾಯಿಗಳನ್ನು ಪ್ರತೀವರ್ಷ ಲೂಟಿ ಮಾಡುತ್ತಿವೆ. ಇದು ದೇಶದ ಆರ್ಥಿಕ ಅಭಿವೃದ್ದಿಗೆ ಸಾಕಷ್ಟು ಅಡ್ಡಿಯನ್ನು ಉಂಟುಮಾಡುತ್ತಿದೆ. ದೇಶದ ಒಂದೇ ಒಂದು ರೂಪಾಯಿ ಒಂದು ವೇಳೆ ವಿದೇಶಿ ಬ್ಯಾಂಕ್‌ಗಳಲ್ಲಿ ಸಂಗ್ರಹವಾಗುತ್ತಿದೆ ಎಂದಾದರೆ ಅದು ಸ್ವದೇಶಿ ಬೊಕ್ಕಸಕ್ಕೆ ಆಗುವ ದೊಡ್ಡ ಹಾನಿ. ಮತ್ತು ದೇಶಕ್ಕೆ ಅಪಾಯಕಾರಿ ಕೂಡ, ದೇಶದ ಅರ್ಥವ್ಯವಸ್ಥೆಯೇ ದೇಶದ ಎಲ್ಲಕ್ಕಿಂತ ದೊಡ್ಡ ಶಕ್ತಿಯಾಗಿದೆ. ಮತ್ತು ಬೆನ್ನೆಲುಬಾಗಿದೆ. ನಾವು ದೇಶವನ್ನು ಶಕ್ತಿಯುತವನ್ನಾಗಿ ಮಾಡಲಿದ್ದೇವೆ. ವಿದೇಶ ಕಂಪನಿಗಳ ವಸ್ತುಗಳನ್ನು ಕೊಂಡು ದೇಶವನ್ನು ಅಶಕ್ತವನ್ನಾಗಿ ಮಾಡಲು ನಾವು ಬಿಡುವುದಿಲ್ಲ. ವಿದೇಶಿಯರು ನಮ್ಮನ್ನು ಸಾಕಷ್ಟು ಲೂಟಿ ಮಾಡಿದ್ದಾರೆ. ಆದ್ದರಿಂದ ವಿದೇಶಿಯರೊಂದಿಗಿನ ವ್ಯಾಪಾರ, ವಹಿವಾಟುಗಳಿಂದ ವಿದೇಶಿ ಹಣವನ್ನು ನಮ್ಮ ದೇಶದೊಳ್ಳಕ್ಕೆ ತರುವುದು. ನಿರ್ಯಾತಕ್ಕೆ ಒತ್ತು ನೀಡುವುದು. ನಮ್ಮ ವಸ್ತುಗಳ ಬಗ್ಗೆ ವಿದೇಶಗಳಲ್ಲಿ ಬೇಡಿಕೆ ಹೆಚ್ಚಿಸುವುದು. ಮಾರುವುದು ಇದೇ ದೇಶದ ಆರ್ಥಿಕ ಸಬಲೀಕರಣಕ್ಕೆ ಇಂದು ಅಗತ್ಯ

(8ನೇ ಪುಟಕ್ಕೆ.....)

6 ನೇ ಪುಟದಿಂದ..... **ಆತ್ಮಶ್ರದ್ಧೆ**

ವಿವೇಕಾನಂದರು ಸ್ವಾಭಾವಿಕವಾಗಿ ಅದ್ಭುತ ಪ್ರತಿಭಾ ಸಂಪನ್ನರು. ಅವರ ಬುದ್ಧಿ ವಿದ್ಯುದ್ವೇಗದಿಂದ ಸಂಚಾರ ಮಾಡತಕ್ಕದ್ದು. ಇನ್ನೊಮ್ಮೆ ಪಕ್ಷಿಯಂತೆ ಗಿರಿಶಿಖರಕ್ಕೆ ಹಾರುವುದು. ಮತ್ತೊಮ್ಮೆ ಹುಲ್ಲುಗಾವಲಿನ ಮೇಲೆ ಮಂದಮಾರುತದಂತೆ ಸುಳಿದಾಡುವುದು. ಒಂದು ತೀಕ್ಷ್ಣತೆ, ಒಂದು ಲಘುತೆ, ಒಂದು ಆವೇಶ, ಒಂದು ವಿಲಾಸ ಇವು ಆ ಬುದ್ಧಿಯ ಗುಣಗಳು. ಅವರು ಸಂಸ್ಕೃತದಲ್ಲಿ ವ್ಯಾಕರಣ ತರ್ಕ ಶಾಸ್ತ್ರಗಳನ್ನು ಸಾಂಗವಾಗಿ ಅಭ್ಯಾಸ ಮಾಡಿದ್ದರು.

ಹಾಗೆಯೇ ಇಂಗ್ಲೀಷ್‌ನಲ್ಲಿ ಕಾವ್ಯ ಇತಿಹಾಸಗಳನ್ನೂ ವಿಜ್ಞಾನಶಾಸ್ತ್ರ ತತ್ವಮೀಮಾಂಸೆಗಳನ್ನೂ ವಿಸ್ತಾರವಾಗಿ ಪರಾಮರ್ಶಿಸಿ ಸ್ವಾಧೀನಪಡಿಸಿಕೊಂಡಿದ್ದರು. ಈ ಉಭಯ ವಿದ್ಯಾಪ್ರಾವೀಣ್ಯಕ್ಕೆ ಅನುರೂಪವಾದ ವಾಗ್ದೋರಣೆ, ತದನುಗುಣವಾದ ಉತ್ತಾಲಧ್ವನಿ, ಉನ್ನತವಾದ ವರ್ಚಸ್ವಿಯಾದ ಗಂಭೀರಾಕಾರ, ಸಕಲ ಜನಮನೋಗ್ರಾಹಿ ಹಾಸ್ಯ, ವಿನೋದ ರಸಿಕತೆ, ಹೃದಯ ವಿದ್ರಾವಕವಾದ ಗಾನಮಾಧುರ್ಯ – ಇವೆಲ್ಲವೂ ಅವರಲ್ಲಿ ಸಮ್ಮಿಳಿತ ವಾಗಿದ್ದವು. ಈ ನಾನಾಗುಣಶಕ್ತಿಗಳಿಗೆ ಕಿರೀಟಪ್ರಾಯವಾದದ್ದು ಶ್ರೀರಾಮಕೃಷ್ಣ ಪರಮಹಂಸ ಗುರುಗಳ ಅನುಗ್ರಹ. ಪರಮಮಹಂಸರವರು ಬ್ರಹ್ಮಸಾಕ್ಷಾತ್ಕಾರವನ್ನು ಪಡೆದಿದ್ದ ಮಹಾಮಹಿಮರು ಜೀವನ್ಮುಕ್ತರು, ಧರ್ಮಸ್ವರೂಪರು. ಈ ರಹಸ್ಯಗಳು ವಿವೇಕಾನಂದರಿಗೆ ಕರತಲಾಮಲಕವಾಗಿದ್ದವು. ವೇದಾಂತವು ಅವರಿಗೆ ಹೊರಗಿನಿಂದ ತೊಡುವ ಅಂಗರೇಖೆಯಾಗಿರಲಿಲ್ಲ. ಒಳಗೇ ಸತತವಾಗಿ ಚಲಿಸುವ ಶ್ವಾಸವಾಯುವಾಯಿತು. ಜೀವನದ ನಾನಾ ಸಂಸ್ಕಾರಗಳು ಈ ಸೂಕ್ಷ್ಮಗಳು ಸಕಲ ಮತಧರ್ಮಗಳಿಗೂ ಮೂಲಭೂತ ವಾದ ವಿಚಾರಗಳು. ಇವುಗಳನ್ನು ಕುರಿತ ನಿಸ್ಸಂಶಯ ಜ್ಞಾನವು ವಿವೇಕಾನಂದರಿಗೆ ಗುರುಗಳು ಕರುಣಿಸಿದ್ದ ಆತ್ಮಸಾಕ್ಷಾತ್ಕಾರ ಬಲದಿಂದ ಫಲಿಸಿತ್ತು. ವಿವೇಕಾನಂದರ ಲೋಕಬೋಧೆಯು ಗ್ರಂಥ ಭಂಡಾರದಿಂದ ಹೊರಟ್ಟಿದ್ದಲ್ಲ. ಶ್ರವಣ ಪರಿಚಯದಿಂದ ಬಂದುದಲ್ಲ. ಅವರು ಅವರ ಆಂತರಿಕಾನುಭವದಿಂದ ಅವರ ಅಂತರಾತ್ಮ ವಿಕಸನದಿಂದ ಗಿಡದಿಂದ ಹೂವು ಹುಟ್ಟುವಂತೆ ತಾನಾಗಿ ಹುಟ್ಟಿಬಂದುದು. ಅದುದರಿಂದಲೇ ಅದರಲ್ಲಿ ಒಂದು ಜೀವಧ್ವನಿ, ಒಂದು ಜೀವೋತ್ತೇಜಕ ಪ್ರಭೆ, ಒಂದು ಜೀವೋಪಯುಕ್ತ ಪ್ರಭೆ, ಒಂದು ಜೀವೋಪಯುಕ್ತ ಶಕ್ತಿ ಇವು ತುಂಬಿವೆ.

ವಿವೇಕಾನಂದರು ಸಂನ್ಯಾಸಿಗಳಾದರೂ ಜೀವನವನ್ನು ತುಚ್ಛವೆಂದೆನಿಸಿದವರಲ್ಲ. ಈ ಜಗತ್ತು ಭಗವಂತನದು, ಇದರ ಜೀವನವೂ ಭಗವಂತನದು, ಆದ ಕಾರಣ ಬದುಕಿನ ವಿಷಯದಲ್ಲಿ ಬದುಕಿರಿ, ತೇಜಸ್ಸಿನಿಂದ ಬದುಕಿರಿ, ನಗುಮುಖದಿಂದ ಬದುಕಿರಿ ಹೀಗೆಂಬ ಜೀವನೋತ್ಸಾಹವು ವಿವೇಕಾನಂದರ ಭೇರಿಯಿಂದ ಧ್ವನಿತವಾಗುತ್ತಿದೆ. ■

7 ನೇ ಪುಟದಿಂದ..... **ಸ್ವಾವಲಂಬಿ ಭಾರತ**

ವಾಗಿದೆ ಒಂದು ವೇಳೆ ನಿಮ್ಮಿಂದಾಗಿ ದೇಶದ ಹಣ ವಿದೇಶಿ ಕಂಪನಿಗಳ ಖಾತೆಗೆ ಹೋಗುತ್ತಿದ್ದಲ್ಲಿ ಇದು ದೇಶಕ್ಕೆ ಒಳಿತಲ್ಲಿ. ಕೆಡುಕಾಗಿದೆ. ನಮ್ಮಿಂದ ದೇಶಕ್ಕೆ ಅಪಾಯ ಉಂಟಾಗ ಕೂಡದು. ಬದಲಾಗಿ ನಮ್ಮಲ್ಲಿ ದೇಶದ ಅಭಿವೃದ್ಧಿಯ ಬಗ್ಗೆ ಹೊಣೆಗಾರಿಕೆಯು ಹಾಗೂ ಒಳ್ಳೆಯ ನಾಗರೀಕ ವ್ಯಾಪಾರಿಗಳಾಗಬೇಕಾಗಿದೆ.

ನಾವಿಂದು ಈ ಪ್ರತಿಜ್ಞೆಯನ್ನು ಮಾಡೋಣ, ನಾವು ಬಹುರಾಷ್ಟ್ರೀಯ ಕಂಪನಿಗಳಿಂದ ತಯಾರಿಸಲಾದ ಶೂನ್ಯ ತಾಂತ್ರಿಕತೆಯಿಂದ, ಕೂಡಿದ ಲಕ್ಸ್, ಲೈಫ್ ಬಾಯ್, ಲಿರಿಲ್, ರೆಕ್ಸೋನಾ, ಪಿಯರ್ಸ್, ಕೋಲ್ಗೇಟ್, ಪೆಪ್ಸೋಡೆಂಟ್, ಕ್ಲೋಸಪ್, ಪಾಂಡ್ಸ್, ರಿನ್, ಲ್ಯಾಕ್ಮೇ, ಡೆಟಾಲ್, ಡಾಲ್ಡ್ ಮುಂತಾದ ದಿನ ಬಳಕೆಯ ವಿದೇಶಿ ಉತ್ಪಾದನೆಗಳು, ಆಮ್ ವೇ ಪೆಪ್ಸಿ, ಕೊಕೊಕೋಲಾಗಳಂತಹಾ ವಿಷಕಾರಿ ಕೂಲ್ ಡ್ರಿಂಕ್ಸ್ ಗಳನ್ನು ಅಕ್ವಾಫಿನಾ ಕಿನ್ಲಿಗಳಂತಹ ಹೆಸರಿನಲ್ಲಿ ಮಾರಾಟವಾಗುತ್ತಿರುವ, ಕುಡಿಯುವ ನೀರು ಹಾಗೂ ಈ ಕಂಪನಿಗಳ ಇನ್ನಿತರ ಜ್ಯೂಸ್‌ಗಳು, ಮೆಕಡೊನಾಲ್ಡ್, ಡೊಮಿನೋ ಮುಂತಾದ ವಿದೇಶಿ ಕಂಪನಿಗಳು ತಯಾರಿಸಿದ ಫಿಜ್ಜಾ – ಬರ್ಗರ್ ಜಂಕ್ ಫುಡ್‌ಗಳನ್ನು ಇನ್ನು ಮುಂದೆ ಎಂದಿಗೂ ನನ್ನ ಜೀವನದಲ್ಲಿ ಬಳಸುವುದಿಲ್ಲ. ಆಕಸ್ಮಾತ್ ಕೆಲವು ವಿದೇಶಿ ಕಂಪನಿಗಳ ಫ್ರೂಟ್ ಜ್ಯೂಸು ನೀರು, ಸಾಬೂನು, ಇನ್ನಿತರ ವಸ್ತುಗಳು ಉತ್ತಮವಾಗಿವೆ ಎನಿಸಿದರು ಸಹ ನಾವು ಆ ವಸ್ತುಗಳನ್ನು ಕೊಳ್ಳುವುದಿಲ್ಲ. ಏಕೆಂದರೆ ಈ ವಸ್ತುಗಳು ಒಂದು ವೇಳೆ ನಮ್ಮ ಆರೋಗ್ಯಕ್ಕೆ ಹಾನಿಕಾರಕವಾಗಿಲ್ಲದಿದ್ದರೂ ದೇಶದ ಅರ್ಥವ್ಯವಸ್ಥೆ ಅಥವಾ ಆರ್ಥಿಕ ಸಮೃದ್ಧಿ ಮತ್ತು ಭಾರತೀಯ ದೇಶೀ ಉದ್ಯೋಗ ಉದ್ದಿಮೆಗಳಿಗೆ ಸಾಕಷ್ಟು ಘಾತಕವಾಗಿವೆ. ಇಂದು ಭಾರತೀಯ ಸ್ವದೇಶಿ ಕಂಪನಿಗಳು ಕೂಡ ಶುದ್ಧತೆ ಹಾಗೂ ಗುಣಮಟ್ಟ ಉಳ್ಳ ದಿನ ಬಳಕೆಯ ವಸ್ತುಗಳನ್ನು ತಯಾರಿಸುತ್ತಿವೆ.

ಹೀಗಾಗಿ ಸ್ವದೇಶಿ ಮಂತ್ರವನ್ನು ನಮ್ಮದಾಗಿಸಿಕೊಂಡು ನಮ್ಮದೇಶವನ್ನು ಆರ್ಥಿಕ ಗುಲಾಮಗಿರಿಯಿಂದ ರಕ್ಷಿಸಬೇಕಾಗಿದೆ. ಸ್ವದೇಶಗಳಲ್ಲಿ ಉದ್ಯೋಗಗಳನ್ನು ಹೆಚ್ಚಿಸಿ ಬಡತನ ನಿರುದ್ಯೋಗ ಮತ್ತು ಹಸಿವಿನಿಂದ ಮುಕ್ತ ಸಶಕ್ತ ಭಾರತವನ್ನು ನಿರ್ಮಿಸಬೇಕಾಗಿದೆ.

ಭಾರತವನ್ನು ಅಶಕ್ತಗೊಳಿಸುವವರಲ್ಲಿ ನಮ್ಮ ಹೆಸರಿರಬಾರದು ಬದಲಿಗೆ ದೇಶಕ್ಕೆ ಶಕ್ತಿ ನೀಡುವವರ ಪಟ್ಟಿಯಲ್ಲಿ ನಮ್ಮ ಹೆಸರು ಮೊದಲಿರಬೇಕು ಆಗ ನಮ್ಮ ಹೆಸರನ್ನು ದೇಶದ್ರೋಹಿಗಳ ಪಟ್ಟಿಯಲ್ಲಲ್ಲ. ಸ್ವದೇಶಿ ವಸ್ತುಗಳನ್ನು ಬಳಸುವ ದೇಶಪ್ರೇಮಿಗಳ ಪಟ್ಟಿಯಲ್ಲಿ ಬರೆಯಲಾಗುತ್ತದೆ.

**(ಸಂಗ್ರಹ)**

3ನೇ ಪುಟದಿಂದ.....

## ದೆಹಲಿಯಲ್ಲಿ ಧರಣಿ

ವ್ಯಯದಲ್ಲಿ ಶೇ. 15ರಷ್ಟು ಶಿಕ್ಷಣಕ್ಕೆ ಮೀಸಲಿಡಬೇಕೆಂದು, ಪ್ರಾಥಮಿಕ ಶಿಕ್ಷಣ ಮಾತೃಭಾಷೆಯಲ್ಲೇ ಇರಬೇಕೆಂದೂ ಒತ್ತಾಯಿಸುವ ಬೇಡಿಕೆ ಪತ್ರವನ್ನು, ಶಿಕ್ಷಕರ ಪ್ರತಿನಿಧಿಗಳ ತಂಡವು ಪ್ರಧಾನ ಕಾರ್ಯದರ್ಶಿಗಳ ನೇತೃತ್ವದಲ್ಲಿ ತೆರಳಿ ಪ್ರಧಾನಮಂತ್ರಿಗಳ ಕಾರ್ಯಾಲಯದಲ್ಲಿ ವಿಶೇಷ ಕಾರ್ಯದರ್ಶಿಗಳಿಗೆ ಮತ್ತು ಶಿಕ್ಷಣ ಮಂತ್ರಾಲಯಕ್ಕೂ ಸಲ್ಲಿಸಲಾಯಿತು.

ಸಾವಿರಾರು ಶಿಕ್ಷಕ-ಶಿಕ್ಷಕಿಯರಿದ್ದರೂ ಧರಣಿಯು ಶಾಂತ ರೀತಿಯಲ್ಲಿ ನಡೆದದ್ದನ್ನು ಕಂಡು ಹಾಜರಿದ್ದ ಹಿರಿಯ ಪೊಲೀಸ್ ಅಧಿಕಾರಿಗಳು, ಶಿಕ್ಷಕರ ನಡತೆಯನ್ನು ಶ್ಲಾಘಿಸಿದ್ದು ವಿಶೇಷವಾಗಿತ್ತು.

### ಪ್ರಧಾನಿಗೆ ಸಲ್ಲಿಸಲಾದ ನಮ್ಮ ಪ್ರಮುಖ ಬೇಡಿಕೆಗಳು

1. ರಾಷ್ಟ್ರೀಯ ಅಸ್ಮಿತೆ, ಭಾರತೀಯ ಜೀವನ ಮೌಲ್ಯಗಳು, ಚಾರಿತ್ರ್ಯ ನಿರ್ಮಾಣ, ಮಾನವೀಯ ಮೌಲ್ಯಗಳು, ಸಾಮಾಜಿಕ ಕಳಕಳಿ, ಮೌಲಿಕ ಚಿಂತನೆ, ಸಂಶೋಧನೆ ಮತ್ತು ನೂತನ ಆವಿಷ್ಕಾರಗಳನ್ನು ಒಳಗೊಳ್ಳುವಂತೆ ಇಂದಿನ ಶಿಕ್ಷಣ ಪದ್ಧತಿಯನ್ನು ಸಂಪೂರ್ಣವಾಗಿ ಪುನರ್‌ರಚಿಸಬೇಕು.
2. ಶಿಕ್ಷಣ ವ್ಯವಸ್ಥೆಯನ್ನು ನಿಯಂತ್ರಿಸಿ ಕ್ರಮಬದ್ಧಪಡಿಸಲು ಕೇಂದ್ರ ಮತ್ತು ರಾಜ್ಯ ಸ್ತರಗಳಲ್ಲಿ ಶಿಕ್ಷಣ ತಜ್ಞರನ್ನು ಒಳಗೊಂಡ ಒಂದು ಸ್ವತಂತ್ರ ಸ್ವಾಯತ್ತ ಆಯೋಗವನ್ನು ರಚಿಸಬೇಕು.
3. ಶಿಕ್ಷಣ ಕ್ಷೇತ್ರದ ಮೂಲಭೂತ ಸೌಲಭ್ಯಗಳಾದ ಶಾಲಾ ಕಟ್ಟಡಗಳು, ಆಟದ ಮೈದಾನ, ಪುಸ್ತಕಗಳು ಮತ್ತು ಪಾಠ ಮಾಡಲು ಅಧ್ಯಾಪಕರುಗಳನ್ನು ಒದಗಿಸುವುದಕ್ಕಾಗಿ ಕೇಂದ್ರ ಸರ್ಕಾರವು ತನ್ನ ಜಿ.ಡಿ.ಪಿ.ಯ ಪ್ರತಿಶತ 15% ರಷ್ಟನ್ನು ರಾಜ್ಯ ಸರ್ಕಾರಗಳು ತಮ್ಮ ಬಜೆಟ್‌ನ ಶೇಖಡಾ 30% ರಷ್ಟನ್ನು ಖರ್ಚು ಮಾಡಬೇಕು.
4. ಇಡೀ ದೇಶದಲ್ಲಿ ಶಿಕ್ಷಣದ ಸ್ವಾಯತ್ತತೆಯನ್ನು ಕಾಪಾಡಲು, ಶಿಕ್ಷಣಕ್ಕೆ ಸಂಬಂಧಿಸಿದ ಎಲ್ಲ ನಿರ್ಣಯಗಳಲ್ಲೂ ಶಿಕ್ಷಕರ ಭಾಗವಹಿಸುವಿಕೆ ಕಡ್ಡಾಯವಾಗಬೇಕು ಮತ್ತು ಯಾವುದೇ ಬಗೆಯ ರಾಜಕೀಯ, ಆಡಳಿತಾತ್ಮಕ ಹಸ್ತಕ್ಷೇಪವನ್ನು ತಡೆಗಟ್ಟಬೇಕು.
5. ಉಚಿತ ಹಾಗೂ ಕಡ್ಡಾಯ ಶಿಕ್ಷಣ ಕಾಯಿದೆಯನ್ನು ಸುಸಂಗತ ಮತ್ತು ವ್ಯಾವಹಾರಿಕಗೊಳಿಸಿ ಅದರ ಪಾಲನೆಯನ್ನು ಕಾರ್ಯರೂಪಗೊಳಿಸಲು ಬೇಕಾದ ಹಣ ಮತ್ತು ಇತರೆ ಸೌಲಭ್ಯಗಳನ್ನು ಒದಗಿಸಬೇಕು.
6. ಪ್ರಾಥಮಿಕ ಶಿಕ್ಷಣ ಕಡ್ಡಾಯವಾಗಿ ಮಾತೃಭಾಷೆಯಲ್ಲಿಯೇ ಇರಬೇಕು.
7. ರಾಷ್ಟ್ರದ ಎಲ್ಲಾ ಮಹಾವಿದ್ಯಾಲಯಗಳಲ್ಲೂ ವಿವಿಧ ಅಧ್ಯಾಪಕ ಹುದ್ದೆಗಳ ಹೆಸರುಗಳನ್ನು ಯುಜಿಸಿ ಶಿಫಾರಸ್ಸಿನಂತೆ ಸಹಾಯಕ ಪ್ರೊಫೆಸರ್, ಅಸೋಸಿಯೇಟ್ ಪ್ರೊಫೆಸರ್ ಹಾಗೂ ಪ್ರೊಫೆಸರ್ ಎಂದು ಏಕರೂಪಗೊಳಿಸಬೇಕು.
8. ಇಡೀ ದೇಶದಲ್ಲಿ ಅನುದಾನಿತ ವಿದ್ಯಾಲಯ ಹಾಗೂ ಮಹಾವಿದ್ಯಾಲಯದ ಶಿಕ್ಷಕರಿಗೆ ವೇತನವನ್ನು ಬ್ಯಾಂಕ್ ಮೂಲಕವೇ ವಿತರಿಸಬೇಕು.
9. ದೇಶದಾದ್ಯಂತ ಏಕರೂಪ ವೇತನ ನಿಯಮ ಮತ್ತು ಏಕರೂಪ ಸೇವಾ ನಿಯಮವನ್ನು ಜಾರಿಗೆ ತಂದು ಸಮಾನಕಾರ್ಯಕ್ಕೆ ಸಮಾನ ವೇತನ ಎಂಬ ಸಿದ್ಧಾಂತವನ್ನು ಪಾಲಿಸಬೇಕು.
10. ಇಡೀ ದೇಶದಲ್ಲಿ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ನಡೆಸುವ ವಿದ್ಯಾ ಸಂಸ್ಥೆಗಳಲ್ಲಿ ಪ್ರಾಥಮಿಕ ಶಿಕ್ಷಕರಿಂದ ಹಿಡಿದು ಕಾಲೇಜು ಶಿಕ್ಷಕರವರೆಗೆ ಲಕ್ಷಾಂತರ ಹುದ್ದೆಗಳು ಖಾಲಿ ಇವೆ. ಸರ್ಕಾರಗಳು ತಮ್ಮ ಆರ್ಥಿಕ ಹೊರೆಯನ್ನು ತಗ್ಗಿಸಲು ವಿದ್ಯಾರ್ಥಿ ಮಿತ್ರ, ಶಿಕ್ಷಾಕರ್ಮಿ, ಸೇವಿಕಾ ಶಿಕ್ಷಕ, ಅತಿಥಿ ಶಿಕ್ಷಕ, ಶಿಕ್ಷಾ ಮಿತ್ರ, ಪೈರಾ ಶಿಕ್ಷಕ ಇತ್ಯಾದಿ ತಾತ್ಕಾಲಿಕ ಹುದ್ದೆಗಳನ್ನು ನಿರ್ಮಿಸುತ್ತಿವೆ. ಶಿಕ್ಷಣದಲ್ಲಿ ಗುಣಮಟ್ಟವನ್ನು ತರಲು ಈ ತಾತ್ಕಾಲಿಕ ವ್ಯವಸ್ಥೆಯನ್ನು ಕೂಡಲೇ ನಿಲ್ಲಿಸಬೇಕು ಮತ್ತು ವಿದ್ಯಾರ್ಥಿ - ಶಿಕ್ಷಕ ಪ್ರಮಾಣವನ್ನು 1:30ರಂತೆ ದೃಢೀಕರಿಸಿ ಕೂಡಲೇ ಎಲ್ಲಾ ವಿಷಯಗಳ ಅಧ್ಯಾಪಕ, ಪ್ರಾಧ್ಯಾಪಕರನ್ನು ಶಾಶ್ವತ ಆಧಾರದ ಮೇಲೆ ನಿಯುಕ್ತಿ ಮಾಡಿಕೊಳ್ಳಬೇಕು.
11. ಇಡೀ ದೇಶದಲ್ಲಿ ಶಿಕ್ಷಕ ಸೇವಾ ನಿವೃತ್ತಿಯ ವಯಸ್ಸನ್ನು ಯುಜಿಸಿ ಯಂತೆ 65 ವರ್ಷಕ್ಕೆ ನಿಗದಿತಗೊಳಿಸಬೇಕು.
12. 2004 ಜನವರಿ 1ಕ್ಕೆ ಇದ್ದ ಮುನ್ನ ಪೆನ್ಷನ್ ಸ್ಕೀಂ ಅನ್ನು ಪುನರ್‌ಜೀವನಗೊಳಿಸಿ ಎಲ್ಲಾ ಶಾಲಾ ಕಾಲೇಜುಗಳ ಶಿಕ್ಷಕರಿಗೆ ಅನ್ವಯಿಸಬೇಕು.
13. ಶಾಲಾ ಕಾಲೇಜುಗಳಲ್ಲಿ ಶಾಶ್ವತವಾಗಿ ಶಿಕ್ಷಕರನ್ನು ನಿಯೋಜಿಸುವವರೆಗೆ ತಾತ್ಕಾಲಿಕವಾಗಿ ಕೆಲಸ ಮಾಡುತ್ತಿರುವ ವಿದ್ಯಾರ್ಥಿ ಮಿತ್ರ, ಅತಿಥಿ ಉಪನ್ಯಾಸಕ ಇತ್ಯಾದಿ ಇತ್ಯಾದಿ ಶಿಕ್ಷಕರಿಗೆ ಒಂದು ನಿರ್ದಿಷ್ಟ ವೇತನವನ್ನು ನಿಗದಿತಗೊಳಿಸಬೇಕು ಹಾಗೂ ಸೇವಾ ನಿಯಮಗಳನ್ನು ರೂಪಿಸಬೇಕು.

●



(ಪುಟ 10ಕ್ಕೆ....)

# ನಾವು ಕಲಿಸುತ್ತಿರುವುದು ನೈಜ ಇತಿಹಾಸವೇ?

ಬ್ರಿಟೀಷರು ಭಾರತವನ್ನು ಗೆದ್ದ ನಂತರ ತಮ್ಮ ರಾಜ್ಯಾಡಳಿತವನ್ನು ಶಾಶ್ವತಗೊಳಿಸಲು ನಮ್ಮ ಶಿಕ್ಷಣ ಪದ್ಧತಿಯನ್ನೇ ಬದಲಿಸಿದರು ಮತ್ತು ನಮ್ಮ ಇತಿಹಾಸವನ್ನು ತಿರುಚಿದರು. ಸ್ವಾತಂತ್ರ್ಯ ಬಂದ ನಂತರ ಬ್ರಿಟೀಷರ ಮೂಸೆಯಲ್ಲೇ ತಯಾರಾದ ನಾಯಕರು ಯಾವ ಬದಲಾವಣೆಯೂ ಮಾಡದೆ ಆಂಗ್ಲರ ರೀತಿನೀತಿಗಳನ್ನೇ ಮುಂದುವರಿಸಿದರು. ಹೀಗಾಗಿ ಅಂದಿನಿಂದ ಇಂದಿನವರೆಗೆ ನಾವು ನಮ್ಮ ಮಕ್ಕಳಿಗೆ ಭಾರತದ ನಿಜವಾದ ಇತಿಹಾಸವನ್ನು ಕಲಿಸದೆ ಕೇವಲ ವಿಕೃತಿಗೊಂಡ ಇತಿಹಾಸವನ್ನು ಕಲಿಸುತ್ತಿದ್ದೇವೆ. ಅದಕ್ಕೆ ಈ ಕೆಳಗಿನ ಉದಾಹರಣೆಗಳು ಸಾಕ್ಷಿಯಾಗಿವೆ.

1. ಈ ದೇಶ ಎಂದೂ ಒಂದು ರಾಷ್ಟ್ರವಾಗಿರಲಿಲ್ಲ. ಇದು ಬಹು ಸಂಸ್ಕೃತಿಗಳ ದೇಶ. ಬಹು ಜನಾಂಗಗಳ ದೇಶ. ಬಹು ರಾಷ್ಟ್ರಗಳ ದೇಶವಾಗಿದ್ದ ನಮ್ಮನ್ನು ಒಂದು ರಾಷ್ಟ್ರವಾಗಿ ರೂಪಿಸಿದವರೇ ಆಂಗ್ಲರು. ಇಲ್ಲಿ ಈಗಿರುವುದು ಏಕಸಂಸ್ಕೃತಿಯಲ್ಲ ಬದಲಿಗೆ ಮಿಶ್ರ ಸಂಸ್ಕೃತಿ.
2. ಆರ್ಯರು ಈ ದೇಶಕ್ಕೆ ಮಧ್ಯ ಏಷ್ಯಾ, ಪೂರ್ವ ಯೂರೋಪ್‌ಗಳಿಂದ ವಲಸೆ ಬಂದವರು. ಅವರು ಅಲ್ಲಿಂದ ತಂದ ಭಾಷೆಯಿಂದಲೇ ಭಾರತದ ಭಾಷೆಗಳು ಸಮೃದ್ಧವಾದವು.
3. ಭಾರತದ ಉತ್ತರ ಭಾಗದಲ್ಲಿನ ಆರ್ಯರು, ದಕ್ಷಿಣ ಭಾಗದಲ್ಲಿನ ದ್ರಾವಿಡರು ಬೇರೆ ಬೇರೆ ಜನಾಂಗಗಳು. ದ್ರಾವಿಡ ಭಾಷೆ, ಜನ, ನಾಗರೀಕತೆಗಳ ಮೇಲೆ ಆರ್ಯರ ದಬ್ಬಾಳಿಕೆ ನಡೆದಿದೆ.
4. ಆರ್ಯರ ಭಾಷೆ ಸಂಸ್ಕೃತ. ದ್ರಾವಿಡ ಭಾಷೆಗಳನ್ನು ಅದು ಹಾಳು ಮಾಡುತ್ತಿದೆ. ಆದ್ದರಿಂದ ಸಂಸ್ಕೃತವನ್ನು ಸಹಿಸದೆ ಅದನ್ನು ಗಮನ ಮಾಡಬೇಕು. ಸಂಸ್ಕೃತ ಮೇಲ್ವರ್ಗದ ಭಾಷೆ. ಇದರ ಮೂಲಕ ಮೇಲ್ವರ್ಗದವರು ಕೆಳವರ್ಗದವರನ್ನು ಶೋಷಿಸುತ್ತಾರೆ. ಆದ್ದರಿಂದ ಸಂಸ್ಕೃತ ಭಾಷೆಗೆ ಉತ್ತೇಜನ ಕೊಡಬಾರದು.
5. ನಮಗೆ ವಿಜ್ಞಾನ, ತಂತ್ರಜ್ಞಾನ ಮುಂತಾದ ಅನ್ಯಾನ್ಯ ಶಾಸ್ತ್ರಗಳ ಪರಿಚಯ ಮಾಡಿಸಿಕೊಟ್ಟವರೇ ಆಂಗ್ಲರು. ಜ್ಞಾನ, ವಿಜ್ಞಾನ, ತಂತ್ರಜ್ಞಾನ, ಸಮಾಜ ವಿಜ್ಞಾನ, ಸಮಾಜ ಶಾಸ್ತ್ರ, ರಾಜ್ಯ ಶಾಸ್ತ್ರ, ಕಲೆ ಇತ್ಯಾದಿ ಕ್ಷೇತ್ರಗಳಲ್ಲಿ ನಮ್ಮ ಸಾಧನೆ ಇಲ್ಲವೇ ಇಲ್ಲ. ಈ ಕ್ಷೇತ್ರದಲ್ಲಿ ನಾವು ಹೆಚ್ಚಿನ ಜ್ಞಾನ ಪಡೆಯಲು ಪಶ್ಚಿಮ ರಾಷ್ಟ್ರಗಳಿಗೆ ಮೊರೆ ಹೋಗಬೇಕು. ಅವರು ಮಾತ್ರ ನಮ್ಮನ್ನು ವೈಜ್ಞಾನಿಕವಾಗಿ ಮೇಲೆತ್ತಬಲ್ಲರು.
6. ಈ ದೇಶದ ಮೇಲೆ ಆಕ್ರಮಣಕಾರರಾಗಿ ಬಂದ ಸೆಂಟ್ ಜ್ಞೇವಿಯರ್, ಬಾಬರ್, ಅಕ್ಬರ್, ಔರಂಗಜೇಬ್, ಖಿಲ್ಜಿ ವಂಶಸ್ಥರು, ಟಿಪ್ಪು ಸುಲ್ತಾನ್, ಬಿಜಾಪುರದ ಸುಲ್ತಾನ್ ಮುಂತಾದವರೆಲ್ಲರೂ ಭಾರತದ ವೀರರು ಮತ್ತು ಜಾತ್ಯಾತೀತವಾದಿಗಳು.
7. ನಾವು ಸ್ವಾತಂತ್ರ್ಯವನ್ನು ಕೇವಲ ಅಹಿಂಸಾ ಮಾರ್ಗ ದಿಂದಲೇ ಪಡೆದುದು.

ಈ ಮೇಲಿನವು ಇತಿಹಾಸದ ವಿಕೃತೀಕರಣಕ್ಕೆ ಒಂದೆರಡು ಉದಾಹರಣೆಗಳು ಮಾತ್ರ. ಇದೇ ರೀತಿ ಗಣಿತ ಶಾಸ್ತ್ರದಲ್ಲಿ ಜಗತ್ತಿಗೆ ನಮ್ಮ ಕೊಡುಗೆಗಳಾದ ಅನೇಕ ಸಂಗತಿಗಳನ್ನು ಪಾಶ್ಚಾತ್ಯರೇ ಕಲಿಸಿದ್ದು ಎಂದೂ ಪಠ್ಯ ಪುಸ್ತಕದಲ್ಲಿ ಸೇರಿಸಿದ್ದಾರೆ. ಉದಾಹರಣೆಗೆ : ಪೈಥಾಗೋರಸ್‌ಗಿಂತ ಮುಂಚೆಯೇ ಅವನು ಹೇಳಿದ ಲಂಬಕೋನ, ತ್ರಿಕೋನ ಮೇಲಿನ ಪ್ರಮೇಯ ನಮಗೆ ತಿಳಿದಿತ್ತು. ಆದರೆ ಇಂದಿಗೂ ಅದನ್ನು ಪೈಥಾಗೋರಸ್ ಪ್ರಮೇಯವೆಂದೇ ಕರೆಯುತ್ತೇವೆ.

**ಈ ಎಲ್ಲಾ ವಿಕೃತಿಗಳನ್ನು ಬದಲಿಸಿ ನಮ್ಮ ನಾಡಿನ ನೈಜ ಇತಿಹಾಸವನ್ನು ಬೋಧಿಸಿದಾಗಲೇ ನಮ್ಮಲ್ಲಿ ರಾಷ್ಟ್ರೀಯ ಸ್ವಾಭಿಮಾನ ದೇಶಭಕ್ತಿ ಆತ್ಮವಿಶ್ವಾಸ ಮುಂತಾದ ಗುಣಗಳು ಬೆಳೆಯುವುದು.** ●

---

5ನೇ ಪುಟದಿಂದ..... **ನಾಯಕತ್ವ**

ಆದರ್ಶಗಳು ಕಣ್ಮರೆಯಾಗುತ್ತಿರುವುದು ದುಃಖದ ಸಂಗತಿ. ಆದರೂ ಶಿಕ್ಷಕ ತನ್ನ ತರಗತಿಯಲ್ಲಿ ಇಂದಿಗೂ ನಾಯಕನೇ. ಹಿಂದೆ ಶಿಕ್ಷಕನೇ ಸಮಾಜಕ್ಕೆ ಗುರು ಸ್ಥಾನದಲ್ಲಿದ್ದವ. ಊರಿನ ಪಂಚಾಯಿತಿ ಕಟ್ಟೆಯಲ್ಲಿ ಗೌರವ ಪಡೆಯುತ್ತಿದ್ದವನು ಶಿಕ್ಷಕನೇ. ಶಿಕ್ಷಕನನ್ನು ಗುರುಸ್ಥಾನದಲ್ಲಿಟ್ಟ ಸಮಾಜ ಆತನ ಮಾತಿಗೆ ಭಾರೀ ಬೆಲೆ ನೀಡುತ್ತಿತ್ತು. ಅದು ಶಿಕ್ಷಕನಲ್ಲಿದ್ದ ಹಣಕ್ಕಾಗಿ ಆಗಿರಲಿಲ್ಲ. ಬಡಮೇಷ್ಟ್ರು ಎಂಬ ಅಭಿಧಾನದಲ್ಲಿ ಬಡತನವಿದ್ದರೂ ಆತ ಎಲ್ಲರ ಗೌರವಕ್ಕೆ ಪಾತ್ರನಾಗಿ ಒಂದರ್ಥದ ನಾಯಕನೆ ಆಗಿದ್ದವನು. ಇದೀಗ ಶಿಕ್ಷಕ ಮೇಲಿನ ಗುಣಗಳನ್ನು ಮತ್ತೆ ಬೆಳೆಸಿಕೊಂಡು ಸಮಾಜಕ್ಕೆ ಮಾರ್ಗ ದರ್ಶನ ನೀಡಬೇಕಾಗಿದೆ. ಗೌರವ ಸಂಪಾದಿಸಬೇಕಾಗಿದೆ. ●

# ಬಸವಣ್ಣನವರ ವಚನಗಳಲ್ಲಿ ವ್ಯಕ್ತಿತ್ವ ನಿರ್ಮಾಣ



ಕ್ರಿ. ಶ. 12ನೆಯ ಶತಮಾನ ಕನ್ನಡ ನಾಡಿನ ಪರ್ವಕಾಲ. ಸಾಮಾಜಿಕ, ರಾಜಕೀಯ, ಧಾರ್ಮಿಕ... ಹೀಗೆ ಎಲ್ಲಾ ಕ್ಷೇತ್ರಗಳಲ್ಲಿ ಕ್ರಾಂತಿಯನ್ನು (ಬದಲಾವಣೆ) ತಂದ ಕಾಲ. ಸಮಾಜದಲ್ಲಿ ರೂಢಿಯಲ್ಲಿದ್ದ ಆಚಾರ–ವಿಚಾರಗಳು, ನಡೆ–ನುಡಿಗಳು, ಆಚರಣೆಗಳು ಎಲ್ಲಾ ಜನರಿಗೂ ಸರಳವಾಗಿ, ಸುಲಭವಾಗಿ ತಿಳಿಯಬೇಕೆಂದು ಚಿಂತಿಸಿ, ಅದಕ್ಕಾಗಿ ಪ್ರಯತ್ನಿಸಿದ ಮಹತ್ವದ ಕಾಲ. ಈ ಉದ್ದೇಶಕ್ಕಾಗಿ ಚಿಂತಕರು ಕಂಡುಕೊಂಡ ಮಾರ್ಗ ವಚನಗಳು.

ವಚನಗಳ ಮೂಲಕ ವಚನಕಾರರು ತಮ್ಮ ಎಲ್ಲಾ ವಿಚಾರಲಹರಿಯನ್ನು ಜನಮನವನ್ನು ಮುಟ್ಟಲು ಪ್ರಯತ್ನಿಸಿದರು. ವಚನಗಳಲ್ಲಿ ಲೋಕಾನುಭವವೂ ಸೇರಿದುದರಿಂದ ಹೆಚ್ಚು ಅರ್ಥಪೂರ್ಣ ಹಾಗೂ ಪರಿಣಾಮಕಾರಿಯಾಯಿತು. ವಚನಗಳು ಸಮಾಜಕ್ಕೆ ಬೇಕಾದ ಎಲ್ಲಾ ವಿಷಯಗಳನ್ನೂ ಒಳಗೊಂಡದ್ದರಿಂದ ಇದು 'ಕನ್ನಡದ ಉಪನಿಷತ್ತು' ಎಂದೇ ಪರಿಗಣಿತವಾಯಿತು. ಈ ಮೂಲಕ ಜನ ಮನವನ್ನು, ಸಮಾಜವನ್ನು ತಿದ್ದುವ ಕೆಲಸವನ್ನು ಮಾಡಲು ನೂರಾರು ವಚನಕಾರರು ಪ್ರಯತ್ನಿಸಿದರು. ಆ ಎಲ್ಲಾ ವಚನಕಾರರ ಮಧ್ಯದಲ್ಲಿ ಹೊಳೆಯುವ ನಕ್ಷತ್ರ ಬಸವಣ್ಣನವರೆಂದರೆ ತಪ್ಪಾಗಲಾರದು.

ವ್ಯಕ್ತಿ ಮತ್ತು ಸಮಾಜ ಅವಿಭಾಜ್ಯ ಅಂಗ. ವ್ಯಕ್ತಿಯ ನಡವಳಿಕೆ ಸಮಾಜಕ್ಕೆ ಹಿತಕಾರಿಯಾಗಿರಬೇಕು. ಅ ನಡವಳಿಕೆ ಹೇಗಿರಬೇಕೆಂಬುದನ್ನು ಬಸವಣ್ಣನವರು ಸರಳವಾದ ವಚನದಲ್ಲಿ ಹೀಗೆ ತಿಳಿಸುತ್ತಾರೆ.

**ಕಳಬೇಡ ಕೊಲಬೇಡ, ಹುಸಿಯ**
**ನುಡಿಯಲು ಬೇಡ, ಮುನಿಯ ಬೇಡ,**
**ಅನ್ಯರಿಗೆ ಅಸಹ್ಯಪಡಬೇಡ**
**ತನ್ನ ಬಣ್ಣಿಸಬೇಡ**
**ಇದಿರ ಹಳಿಯಲುಬೇಡ**
**ಇದೇ ಅಂತರಂಗ ಶುದ್ಧಿ !**
**ಇದೇ ಬಹಿರಂಗ ಶುದ್ಧಿ !**
**ಇದೇ ನಮ್ಮ ಕೂಡಲಸಂಗಮದೇವನನೊಲಿಸುವ ಪರಿ.**

ಕಳ್ಳತನ ಮಾಡಬೇಡ, ಸುಳ್ಳಾಡಬೇಡ, ಕೊಲ್ಲಬೇಡ, ಕೋಪ ಮಾಡಿಕೊಳ್ಳಬೇಡ, ಬೇರೆಯವರ ಬಗ್ಗೆ ಅಸಹ್ಯ ಪಡಬೇಡ. ತನ್ನನ್ನೇ ಹೊಗಳಿಕೊಳ್ಳಬೇಡ. ಈ ಎಲ್ಲವನ್ನೂ ಕೇಳಿದಾಗ, ಓದಿದಾಗ ಎಷ್ಟು ಸುಲಭ ಎಂದೆನಿಸುತ್ತದೆ. ಆದರೆ ಸಮಾಜದಲ್ಲಿ ಆ ರೀತಿ ನಡೆದುಕೊಳ್ಳುವುದು ಎಷ್ಟು ಕಷ್ಟ ಎನ್ನುವುದು ಎಲ್ಲರಿಗೂ ಅನುಭವ ವೇದ್ಯ. ಆದರೆ ಕಷ್ಟವಾದರೂ ಈ ವಚನದಂತೆ ವ್ಯಕ್ತಿ ನಡೆದುಕೊಳ್ಳುವುದಾದರೆ ವ್ಯಕ್ತಿಯ ಹಾಗೂ ಸಮಾಜದ ಅಂತರಂಗ ಬಹಿರಂಗಗಳು ಶುದ್ಧವಾಗುವುದರಲ್ಲಿ ಸಂದೇಹವಿಲ್ಲ.

ನಾವು ಸಾಮಾನ್ಯವಾಗಿ ಬೇರೆಯವರ ತಪ್ಪುಗಳನ್ನು ಟೀಕಿಸುತ್ತಾ ಇರುತ್ತೇವೆ. ನಮ್ಮ ತಪ್ಪುಗಳು ಗಮನಕ್ಕೆ ಬರುವುದೇ ಇಲ್ಲ. ಮೊದಲು ನಮ್ಮನ್ನು ನಾವು ತಿದ್ದಿಕೊಳ್ಳಬೇಕು. ಲೋಕ ತಾನಾಗಿಯೇ ಸರಿ ಹೋಗುತ್ತದೆ ಎಂದು ಬಸವಣ್ಣನವರು ಈ ವಚನದ ಮೂಲಕ ಸಾರಿ ಹೇಳಿದ್ದಾರೆ.

**ಲೋಕದ ಡೊಂಕ ನೀವೇಕೆ ತಿದ್ದುವಿರಿ ?**
**ನಿಮ್ಮ ನಿಮ್ಮ ತನುವ ಸಂತೈಸಿಕೊಳ್ಳಿ**
**ನಿಮ್ಮ ನಿಮ್ಮ ಮನವ ಸಂತೈಸಿಕೊಳ್ಳಿ**
**ನೆರೆಮನೆಯ ದುಃಖಕ್ಕೆ ಅಳುವವರ**
**ಮೆಚ್ಚ ನಮ್ಮ ಕೂಡಲ ಸಂಗಮದೇವ**

'ಕೋಪವೆಂಬುವನರ್ಥ ಸಾಧನ' ವ್ಯಕ್ತಿಗೆ ತಾಳ್ಮೆ, ಸಹನೆ ಅತ್ಯಗತ್ಯ. ಕೋಪದಿಂದಾಗುವ ಅನರ್ಥಗಳನ್ನು ಬಸವಣ್ಣನವರು ಸರಳವಾಗಿ ತಿಳಿಸಿ ಶಾಂತ ಮನಸ್ಸನ್ನು ಬೆಳೆಸಿಕೊಳ್ಳುವಂತೆ ಹೀಗೆ ಹೇಳುತ್ತಾರೆ :

**ತನಗೆ ಮುನಿವರಿಗೆ ತಾ ಮುನಿಯಲೇಕಯ್ಯ?**
**ತನಗಾದಡೇನು ? ಅವರಿಗಾದಡೇನು ?**
**ತನುವಿನ ಕೋಪ ತನ್ನ ಹಿರಿಯತನದ ಕೇಡು**
**ಮನದ ಕೋಪ ತನ್ನ ಅರುಹಿನ ಕೇಡು**
**ಮನೆಯೊಳಗಣ ಕಿಚ್ಚು**
**ಮನೆಯ ಸುಟ್ಟಿತಲ್ಲದೆ**
**ನೆರೆಮನೆಯ ಸುಡದು ಕೂಡಲಸಂಗಮದೇವ**

(ಮುಂದಿನ ಪುಟಕ್ಕೆ...)

ಪುಟ 11 ರಿಂದ...

## ಬಸವಣ್ಣನವರ ವಚನಗಳಲ್ಲಿ

ಮಾನವನಿಗೆ ಆಸ್ತಿ, ಅಂತಸ್ತು ಹೆಚ್ಚಾದಾಗ, ಎಲ್ಲವನ್ನೂ, ಎಲ್ಲರನ್ನೂ ಮರೆಸುತ್ತದೆ. ಆಗ ಅವನ ನಡವಳಿಕೆ ಇತರರಿಗೆ ನೋವನ್ನು ಉಂಟು ಮಾಡುವಂತಿರುತ್ತದೆ. ಆದರೆ ಐಶ್ವರ್ಯ ಶಾಶ್ವತವಲ್ಲ. ಲಕ್ಷ್ಮಿ ಚಂಚಲೆ ಎಂಬುದನ್ನು ನೆನಪಿನಲ್ಲಿಟ್ಟಿರಬೇಕು ಎಂಬ ಎಚ್ಚರಿಕೆಯನ್ನು ಬಸವಣ್ಣನವರು ಕೊಡುತ್ತಾರೆ ಈ ವಚನದಲ್ಲಿ.

**ಹಾವು ತಿಂದವರ ನುಡಿಸಬಹುದು ;**
**ಗರ ಹೊಡೆದವರ ನುಡಿಸಬಹುದು.**
**ಸಿರಿಗರ ಹೊಡೆದವರ ನುಡಿಸಲು**
**ಬಾರದು ನೋಡಯ್ಯಾ**
**ಬಡತನವೆಂಬ ಮಂತ್ರವಾದಿಯಾಗಲು**
**ಒಡನೆ ನುಡಿವರಯ್ಯ ಕೂಡಲ ಸಂಗಮದೇವಾ**

ಇನ್ನು ಮನುಷ್ಯನಿಗೆ ಮಾತು ಬಹಳ ಮುಖ್ಯ. ಮಾತಿನಿಂದಲೇ ಅವನ ಗುಣವನ್ನು ನಿರ್ಧರಿಸಬಹುದು. ನಮ್ಮ ಮಾತು ಮೃದುವಾಗಿರಬೇಕು. ಬಿಗುವಾನದಿಂದ ಕೂಡಿರಬಾರದು. ಮಾತಿನಿಂದ ನಾವು ಕಳೆದುಕೊಳ್ಳುವುದೇನೂ ಇಲ್ಲ ಎಂಬುದನ್ನು ಈ ವಚನದಲ್ಲಿ ಕಾಣಬಹುದು.

**ಏನು ಬಂದಿರಿ ಹದುಳಿದ್ದಿರೆ ಎಂದಡೆ**
**ನಿಮ್ಮೈಸಿರಿ ಹಾರಿಹೋಹುದೇ ?**
**ಕುಳ್ಳಿರೆಂದರೆ ನೆಲಕುಳಿಹೋಹುದೇ ?**
**ಒಡನೆ ನುಡಿದರೆ ಶಿರ, ಹೊಟ್ಟೆ ಒಡೆವುದೆ ?**
**ಕೊಡಲಿಲ್ಲದಿದ್ದರೊಂದು ಗುಣವಿಲ್ಲದಿದ್ದಡೆ**
**ಮೂಗ ಕೊಯ್ವವ ಮಾಬನೆ**
**ಕೂಡಲಸಂಗಮದೇವಯ್ಯ ?**

ನಾವು ಆಡುವ ಮಾತು ಹೇಗಿರಬೇಕೆಂದು ಬಸವಣ್ಣನವರು ತಮ್ಮ ಈ ವಚನದಲ್ಲಿ ಸ್ಪಷ್ಟಪಡಿಸಿದ್ದಾರೆ.

**ನುಡಿದರೆ ಮುತ್ತಿನ ಹಾರದಂತಿರಬೇಕು !**
**ನುಡಿದರೆ ಮಾಣಿಕ್ಯದ ದೀಪ್ತಿಯಂತಿರಬೇಕು !**
**ನುಡಿದರೆ ಸ್ಫಟಿಕದ ಶಲಾಕೆಯಂತಿರಬೇಕು !**
**ನುಡಿದರೆ ಲಿಂಗ ಮೆಚ್ಚಿ ಅಹುದಹುದೆನಬೇಕು !**
**ನುಡಿಯೊಳಗಾಗಿ ನಡೆಯದಿದ್ದರೆ**
**ಕೂಡಲಸಂಗಮದೇವನೆಂತೊಲಿವನಯ್ಯ ?**

ಸಮಾಜದಲ್ಲಿ ವಿದ್ಯಾರ್ಥಿಗಳ ವ್ಯಕ್ತಿತ್ವವನ್ನು ನಿರ್ಮಿಸಿ, ಅವರನ್ನು ಸತ್ಪ್ರಜೆಗಳನ್ನಾಗಿ ರೂಪಿಸುವ ಮಹತ್ತರ ಜವಾಬ್ದಾರಿ ಶಿಕ್ಷಕರದು. ಬಸವಣ್ಣನವರ ವ್ಯಕ್ತಿತ್ವ ನಿರ್ಮಾಣದ ವಚನಗಳನ್ನು ಮಕ್ಕಳಿಗೆ ನೆನಪಿಸುವುದರ ಮೂಲಕ ಅವರನ್ನು ಸಮಾಜದಲ್ಲಿ ಒಳ್ಳೆಯ ವ್ಯಕ್ತಿಗಳನ್ನಾಗಿ ರೂಪಿಸಬಹುದಲ್ಲವೇ ? ಆ ಮೂಲಕ ಸುಂದರ, ಸುಖೀ, ಸಮಾಜವನ್ನು ಕಾಣಬಹುದೆಂದು ಆಶಿಸಬಹುದಲ್ಲವೇ ?

■ ಶ್ವೇತಾದ್ರಿ

Reg. No. RNI 45459/85
CPMG/KA/BGS-125/2012-14
Posted at Bangalore GPO
Bangalore - 560 001

MAY 2013
Date of Posting
20th or 21st of every month

**ಶಿಕ್ಷಕ ಸಮಾಚಾರ ತರಿಸಲು ಇಲಾಖೆಯ ಆದೇಶ**

D.P.I. (Sepecial) ಅವರ ಆದೇಶ ಸಂಖ್ಯೆ T3-LBS-RKM-7/79-80 ದಿನಾಂಕ 20-6-1980 ರ ಪ್ರಕಾರ ರಾಜ್ಯದ ಎಲ್ಲಾ ಪ್ರಾಥಮಿಕ ಶಾಲೆಗಳು, ಹೈಸ್ಕೂಲುಗಳು, ಜ್ಯೂನಿಯರ್ ಕಾಲೇಜುಗಳು ಮತ್ತು ಶಿಕ್ಷಕರ ತರಬೇತಿ ಸಂಸ್ಥೆಗಳು (T.T.I.) ತಮ್ಮ ವಾಚನಾಲಯ ಅಥವಾ ಪುಸ್ತಕಾಲಯ ನಿಧಿಯಿಂದ ''ಅಖಿಲ ಕರ್ನಾಟಕ ಶಿಕ್ಷಕ ಸಮಾಚಾರ'' ಚಂದಾ ಪಾವತಿ ಮಾಡಬಹುದು.

IF UNDELIVERED PLEASE RETURN TO SENDER

Published for K.S.S.T.A. by K. Narahari
# 55, Yadavasmruthi, 1st Main, Sheshadripuram,
Bangalore - 560 020. ✆ : 080-23466495
Printed at : RASHTROTTHANA MUDRANALAYA, Bangalore - 560 019.

srushtidesigns@gmail.com